20 ಸೆಪ್ಟೆಂಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 192 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ




ಅಬುಧಾಬಿ ಶುಕ್ರವಾರ ನಡೆದ ಏಷ್ಯಾಕಪ್ ಟಿ-20 ಕ್ರಿಕೆಟ್ ಟೂರ್ನಿಯ ಒಮನ್ ವಿರುದ್ಧದ ಪಂದ್ಯದಲ್ಲಿ ಅರ್ಧ ಶತಕ ಗಳಿಸಿದ ಭಾರತದ ಸಂಜು ಸ್ಯಾಮ್ಸನ್...


ಮೊಸಳೆ ಹೊಸಹಳ್ಳಿಯ ಭೀಕರ ಅಪಘಾತ » 2


ಹಿಂದೂ ದನ್ನದ ಮಠಾಧೀಶರು ಖಾವಿ ಬಟ್ಟೆ ತ್ಯಜಿಸಲಿ » 3


ಆರಂಭದಲ್ಲೇ ರೋಗಬಾಧೆ ನಿಯಂತ್ರಣಕ್ಕೆ ಕ್ರಮ ವಹಿಸಿ » 4

## ದಸರಾ ಉದ್ಘಾಟನೆಗೆ : ಸುಪ್ರೀಂನಲ್ಲಿ ಅರ್ಜಿ ವಜಾ

• ಪ್ರಜೋದಯ ವರದಿ

**ನವದೆಹಲಿ:** ಮೈಸೂರು ದಸರಾ ಉದ್ಘಾಟನೆಗೆ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಎತ್ತಿ ಹಿಡಿದ ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಬೆಂಗಳೂರಿನ ಹಾಲನಾಯಕನಹಳ್ಳಿಯ ಹೆಚ್.ಎಸ್.ಗೌರವ್ ಎಂಬುವವರು ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ನ್ಯಾ.ವಿಕ್ರಮ್ ನಾಥ್ ನೇತೃತ್ವದ ದ್ವಿಸದಸ್ಯ ಪೀಠವು ಅರ್ಜಿ ವಿಚಾರಣೆ ನಡೆಸಿತು. ಅರ್ಜಿದಾರರ ಪರ ವಾದ ಆಲಿಸಿದ ಪೀಠ, ನಮ್ಮ ದೇಶದ ಸಂವಿಧಾನದ ಪ್ರಸ್ತಾವನೆ ಏನೆಂದು ಪ್ರಶ್ನಿಸಿತು.

ದಸರಾ ಉದ್ಘಾಟನೆಯಂತಹ ಧಾರ್ಮಿಕ ಸಮಾರಂಭವನ್ನು ಅನ್ಯ ಧರ್ಮದ ವ್ಯಕ್ತಿ ಉದ್ಘಾಟಿಸುವುದು ಸೂಕ್ತವಲ್ಲ. ಅದೊಂದು ರಾಜಕೀಯ ಉದ್ದೇಶದಿಂದ ಮಾಡಿದ ಕ್ರಮವೆಂದು ಅರ್ಜಿದಾರರು ಆರೋಪಿಸಿದರು.

ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಅವರು ವಾದ ಮಂಡಿಸಿದರು. ಉಭಯ ವಾದ ಆಲಿಸಿದ ನಂತರ, ನ್ಯಾಯ ಪೀಠವು ದೂರುದಾರರ ಅರ್ಜಿಯನ್ನು ವಜಾಗೊಳಿಸಿತು.

# ಜಾತಿಗಣತಿ ಮುಂದೂಡುವುದಿಲ್ಲ: ಸಿ.ಎಂ.

## ಸರ್ಕಾರದಿಂದಲೇ ಅಧಿಕೃತ ಆದೇಶ-ಗೊಂದಲಗಳಿಗೆ ತೆರೆ

• ಪ್ರಜೋದಯ ವರದಿ

**ಬೆಂಗಳೂರು:** ಹಿಂದುಳಿದ ಜಾತಿಗಳ ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆ (ಜಾತಿಗಣತಿ) ಯನ್ನು ಮುಂದೂಡುವುದಿಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ.

ಕೆಲ ಸಚಿವರು ಜಾತಿ ಸಮೀಕ್ಷೆಯನ್ನು ವಿರೋಧಿಸಿ ಮುಂದೂಡಲು ಪ್ರಯತ್ನಿಸಿದ್ದಾರೆಂಬ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಹಿಂದುಳಿದ ವರ್ಗಗಳ ಆಯೋಗವು ಸಮೀಕ್ಷೆಯನ್ನು ಹೇಗೆ ನಡೆಸಬೇಕೆಂದು ನಿರ್ಧರಿಸುತ್ತದೆ. ಹಿಂದುಳಿದ ವರ್ಗಗಳ ಆಯೋಗವು ಸಾಂವಿಧಾನಿಕವಾಗಿ ರೂಪುಗೊಂಡ ಶಾಸನಬದ್ಧ ಸಂಸ್ಥೆಯಾಗಿದೆ. ನಾವು ಅದಕ್ಕೆ ಯಾವುದೇ ನಿರ್ದೇಶನ ನೀಡಲು ಸಾಧ್ಯವಿಲ್ಲ. ಅವರು ಅಭಿಪ್ರಾಯ ಕೇಳಿದ್ದಾರೆ. ಸೆ.22 ರಿಂದ ಕೆಲ ಸಣ್ಣಪುಟ್ಟ ಬದಲಾವಣೆಗಳೊಂದಿಗೆ ಸಮೀಕ್ಷೆ ನಡೆಸಲು ಸೂಚನೆ ನೀಡಿದ್ದೇನೆಂದರು.

ಸಚಿವರು ಸಮೀಕ್ಷೆಯ ಬಗ್ಗೆ ಅತೃಪ್ತರಾಗಿದ್ದಾರೆಂಬ ಹೇಳಿಕೆಗಳನ್ನು ತಳ್ಳಿಹಾಕಿದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು, ಈ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ. ಕಾಂಗ್ರೆಸ್ ಸರ್ಕಾರವನ್ನು ಹಿಂದೂ ವಿರೋಧಿ ಎಂದು ಬಿಂಬಿಸುತ್ತಿದ್ದಾರೆ. ಅದನ್ನು ಖಂಡಿಸಿ ಅವರಿಗೆ ಸರಿಯಾದ ಉತ್ತರ ನೀಡುವಂತೆ ಸಚಿವರಿಗೆ ಹೇಳಿದ್ದೇನೆ ಎಂದರು.



**ಶೋಭಾ ಕರಂದ್ಲಾಜೆ ಟೀಕೆ**

ಸಿದ್ದರಾಮಯ್ಯ ಆಡಳಿತದಲ್ಲಿ ವಿಫಲರಾದಾಗಲೆಲ್ಲಾ ಜಾತಿ ಅಸ್ತ್ರವನ್ನು ಮುನ್ನೆಲೆಗೆ ತರುತ್ತಾರೆಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸಮೀಕ್ಷೆಯ ಬಗ್ಗೆ ಟೀಕಿಸಿದ್ದಾರೆ.

2013 ರಿಂದ 2018 ರವರೆಗಿನ ತಮ್ಮ ಹಿಂದಿನ ಅವಧಿಯಲ್ಲಿ ಸಿದ್ದರಾಮಯ್ಯ ಲಿಂಗಾಯತರು ಮತ್ತು ವೀರಶೈವರನ್ನು ವಿಭಜಿಸಲು ಪ್ರಯತ್ನಿಸಿದ್ದರು. ಗ್ರಾಮ ಮಟ್ಟದಲ್ಲಿ ಈ ಸಮಸ್ಯೆಯನ್ನು ಪ್ರಚೋದಿಸುವ ಪ್ರಯತ್ನಗಳು ಸೇರಿವೆ. ಈಗ ಸಿದ್ದರಾಮಯ್ಯ ಎಲ್ಲಾ ಜಾತಿಗಳನ್ನು ಒಡೆಯಲು ಮುಂದಾಗಿದ್ದಾರೆ. ಒಕ್ಕಲಿಗರು, ಲಿಂಗಾಯತರು ಮತ್ತು ಗಾಣಿಗರೊಳಗಿನ ವಿವಿಧ ಉಪಜಾತಿಗಳನ್ನು ವಿಭಜಿಸಲು ಪ್ರಯತ್ನಿಸಿದ ನಂತರ, ಒಕ್ಕಲಿಗ ಕ್ರೈಸ್ತರು, ಲಿಂಗಾಯತ ಕ್ರೈಸ್ತರು ಹೊರತಂದಿದ್ದಾರೆ. ಯಾರಾದರೂ ಕ್ರಿಶ್ಚಿಯನ್ ಆಗಿದ್ದರೆ ಹಾಗು ಮತಾಂತರಗೊಂಡವರು ತಮ್ಮನ್ನು ಕ್ರಿಶ್ಚಿಯನ್ನರು ಎಂದು ಬರೆಯಬೇಕು. ಅವರಿಗೆ ಅಲ್ಪಸಂಖ್ಯಾತ ವರ್ಗದ ಅಡಿಯಲ್ಲಿ ಸೌಲಭ್ಯಗಳು ಸಿಗುತ್ತವೆ. ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡವರ ಪರವಾಗಿ ಮೀಸಲಾತಿ ಕಸಿದುಕೊಳ್ಳಲು ಸಂಘಟಿತ ಪಿತೂರಿ ನಡೆಯುತ್ತಿದೆ ಎಂದು ಆರೋಪಿಸಿದರು.

**ಎಸ್‌ಸಿ ಜನಾಂಗದ ಸಮೀಕ್ಷೆ ಬೇಡ**

ಸಿದ್ದರಾಮಯ್ಯ ಸರ್ಕಾರ ಜಾತಿ ಗಣತಿ ವಿಚಾರವಾಗಿ ಗೊಂದಲ ಸೃಷ್ಟಿ ಮಾಡುತ್ತಿದೆ. ಎರಡು ತಿಂಗಳ ಹಿಂದೆ ಎಸ್‌ಸಿ-ಎಸ್‌ಟಿ ಜಾತಿಗಣತಿ ಆಗಿದೆ. ಮತ್ತೊಮ್ಮೆ ಮಾಡುವುದಕ್ಕೆ ನಮ್ಮ ವಿರೋಧ ಇದೆ. ಎರಡು ತಿಂಗಳ ಹಿಂದೆ ನಡೆದ ಗಣತಿಯಲ್ಲಿ ಎಸ್‌ಸಿ ಜನಾಂಗದ ಮುಂದೆ ಕ್ರಿಶ್ಚಿಯನ್ ಎಂಬ ಉಲ್ಲೇಖ ಇರಲಿಲ್ಲ. ಆದರೀಗ ಕ್ರಿಶ್ಚಿಯನ್ ಉಲ್ಲೇಖ ಇದೆ. ಹಾಗಾಗಿ ಎಸ್‌ಸಿ ಜನಾಂಗದ ಸಮೀಕ್ಷೆ ಮಾಡಬಾರದೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಒತ್ತಾಯಿಸಿದ್ದಾರೆ.

**ಸಮೀಕ್ಷೆಗೆ ಸಿದ್ಧರಿರುವಂತೆ ಸೂಚನೆ**

ಜಾತಿ ಜನಗಣತಿ ನಡೆಯುವುದು ಖಚಿತವಾಗಿದ್ದು, ಸರ್ಕಾರ ಅಧಿಕೃತ ಆದೇಶ ಪ್ರಕಟಿಸಿದೆ. ಸೆ.22 ರಿಂದ ಅ.7 ರವರೆಗೆ ಸಮೀಕ್ಷೆ ನಡೆಸಲಾಗುವುದೆಂದು ಆದೇಶದಲ್ಲಿ ತಿಳಿಸಲಾಗಿದೆ.

**ಹೈಕೋರ್ಟ್ ನೋಟೀಸ್**

ಜಾತಿ ಗಣತಿ ವಿರೋಧಿಸಿ ಸಲ್ಲಿಕೆಯಾಗಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಕೇಂದ್ರದ ಸೆನ್ಸಸ್ ಕಮೀಷನರ್, ಹಿಂದುಳಿದ ವರ್ಗಗಳ ಆಯೋಗ, ರಾಜ್ಯ ಹಾಗು ಕೇಂದ್ರ ಸರ್ಕಾರಕ್ಕೆ ನೋಟೀಸ್ ಜಾರಿ ಮಾಡಿದೆ. ರಾಜ್ಯ ಸರ್ಕಾರದ ಜಾತಿ ಗಣತಿ ವಿರೋಧಿಸಿ ರಾಜ್ಯ ಒಕ್ಕಲಿಗರ ಸಂಘ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ವೀರಶೈವ-ಲಿಂಗಾಯತ ಮಹಾಸಭಾದ ಸದಸ್ಯರು ಹಾಗು ಖಾಸಗಿ ವ್ಯಕ್ತಿ ಗಳಿಂದಲೂ ಪ್ರತ್ಯೇಕವಾಗಿ ರಿಟ್ ಅರ್ಜಿ ಸಲ್ಲಿಕೆ ಮಾಡಲಾಗಿತ್ತು. ಹಿಂದುಳಿದ ವರ್ಗಗಳ ಆಯೋಗದ ಪರ ಹಿರಿಯ ವಕೀಲ ಪ್ರೊ. ರವಿವರ್ಮಕುಮಾರ್ ಕಾಲಾವಕಾಶ ಕೋರಿದರು. ಬುಧವಾರದವರೆಗೆ ವಿಚಾರಣೆ ಮುಂದೂಡಲು ಸರ್ಕಾರದ ಪರ ಎಜಿ ಪ್ರತಿಮಾ ಹೊನ್ನಾಪುರ ಮನವಿ ಮಾಡಿದರು.

## ಬೇಲೂರು ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಅಮಾನತು

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕು ಮಟ್ಟದ ಕ್ರೀಡಾಕೂಟದ ಆಹ್ವಾನ ಪತ್ರಿಕೆಯಲ್ಲಿ ಶಾಸಕರ ಹೆಸರು ಮುದ್ರಿಸದೆ ಶಿಷ್ಟಾಚಾರ ಉಲ್ಲಂಘನೆ ಹಾಗು ಇತರ ಆರೋಪಗಳಿಗೆ ಗುರಿಯಾಗಿದ್ದ ಬೇಲೂರು ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅಧೀನ ಕಾರ್ಯದರ್ಶಿ ಮಲ್ಲಿಕಾರ್ಜುನ ರಾಮಚಂದ್ರಪ್ಪ ಅವರು ಆದೇಶಿಸಿದ್ದಾರೆ.

ಸೆ.10ರಂದು ಬೇಲೂರಿನಲ್ಲಿ ನಡೆದ ತಾಲ್ಲೂಕು ಮಟ್ಟದ ಕ್ರೀಡಾಕೂಟಕ್ಕೆ ಆಗಮಿಸಿದ್ದ ಶಾಸಕ ಹೆಚ್.ಕೆ.ಸುರೇಶ್ ಅವರ ಪಕ್ಕದಲ್ಲೇ ರಾಜೇಗೌಡ ಆಸೀನರಾಗಿದ್ದರು. ಆಹ್ವಾನ ಪತ್ರಿಕೆಯಲ್ಲಿ ತಮ್ಮ ಹೆಸರು ಹಾಕಿಲ್ಲವೆಂದು ಶಾಸಕ ಸುರೇಶ್ ತರಾಟೆಗೆ ತೆಗೆದುಕೊಂಡು, ಇಂತಹ ಭ್ರಷ್ಟ ಅಧಿಕಾರಿ ನನ್ನ ಪಕ್ಕ ಕೂರುವುದು ಬೇಡ. ರಾತ್ರಿಯಾದರೆ ಪಾನಮತ್ತನಾಗಿ ಶಿಕ್ಷಕರಿಗೆಲ್ಲಾ ಕರೆ ಮಾಡಿ ಚಿತ್ರಹಿಂಸೆ ನೀಡುತ್ತಾನೆಂದು ಆಕ್ರೋಶ ವ್ಯಕ್ತಪಡಿಸಿದ್ದರು.

ಶಾಸಕರ ಮಾತಿಗೆ ಆಕ್ಷೇಪ



ವ್ಯಕ್ತಪಡಿಸಿದ್ದ ರಾಜೇಗೌಡ, ಏರು ದನಿಯಲ್ಲಿ ತಿರುಗೇಟು ನೀಡಿದ್ದರು. ನಾನು ತಾಲ್ಲೂಕಿನ ಬಿಇಓ, ನಾನು ಇದೇ ಸೀಟಿನಲ್ಲಿ ಕುಳಿತುಕೊಳ್ಳುತ್ತೇನೆಂದು ವಾಗ್ವಾದ ನಡೆಸಿದ್ದರು. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ್ದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರು ಮೇಲಾಧಿಕಾರಿಗೆ ವರದಿ ಒಪ್ಪಿಸಿದ್ದರು.

**ರಾಜೇಗೌಡರ ವಿರುದ್ಧ ಗುರುತರ ಆರೋಪ**

ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡರ ಅಮಾನತಿಗೆ 7 ಗುರುತರ ಆರೋಪಗಳನ್ನು ಪಟ್ಟಿ ಮಾಡಲಾಗಿದೆ.

» ನಾಲ್ಕನೇ ಪುಟದಲ್ಲಿ

## ಹಾಸ್ಟೆಲ್‌ನಲ್ಲೇ ಎಂಸಿಇ ಕಾಲೇಜು ವಿದ್ಯಾರ್ಥಿ ಆತ್ಮಹತ್ಯೆ

### ಟಾಪರ್ ಆಗಿದ್ದ ದರ್ಶನ್ | ಒಂಟಿತನದಿಂದ ಜಿಗುಪ್ಸೆಗೊಂಡಿದ್ದ ಎಂಬ ಶಂಕೆ

• ಪ್ರಜೋದಯ ವರದಿ



**ಹಾಸನ:** ನಗರದ ಸಾಲಗಾಮೆ ರಸ್ತೆಯಲ್ಲಿರುವ ಮಲೆನಾಡು ತಾಂತ್ರಿಕ ಮಹಾವಿದ್ಯಾಲಯ ವಿದ್ಯಾರ್ಥಿ ಕಾಲೇಜಿನ ವಸತಿ ನಿಲಯದಲ್ಲಿ ನೇಣಿಗೆ ಶರಣಾಗಿರುವ ಘಟನೆ ಗುರುವಾರ ನಡೆದಿದೆ.

ತುರುವೇಕೆರೆ ನಗರದ ನಂಜುಂಡೇಗೌಡ ಹಾಗು ಮಮತಾ ದಂಪತಿ ಪುತ್ರ ದರ್ಶನ್ (24) ಮೃತ ದುರ್ದೈವಿ. ಅಂತಿಮ ವರ್ಷದಲ್ಲಿ ಓದುತ್ತಿದ್ದ ದರ್ಶನ್ ಸಿವಿಲ್ ಇಂಜಿನೀಯರ್ ವಿಭಾಗದಲ್ಲಿ ಟಾಪರ್ ಆಗಿದ್ದ. ಮೂರುವರೆ ವರ್ಷಗಳಿಂದ ಕಾಲೇಜಿನಲ್ಲೇ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿ ಮೃದು ಸ್ವಭಾವದವನಾಗಿದ್ದು, ಮಾತ್ರವಲ್ಲದೆ ವಿದ್ಯಾಭ್ಯಾಸ ಹೊರತುಪಡಿಸಿ ಬೇರೆ ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ.

**ಏಕಾಂಗಿತನ ಕಾಡಿರುವ ಸಂಶಯ**

ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಿಂಗಲ್ ರೂಮ್ ಕೊಡಲಾಗುತ್ತದೆ. ದರ್ಶನ್ ಕೂಡ ಹಾಸನಾಂಬ ವಿಭಾಗ ಕೊಠಡಿ ಸಂಖ್ಯೆ ಹೆಚ್.ಎ. 159ರಲ್ಲಿ ಇರುತ್ತಿದ್ದ. ಗುರುವಾರ ಎಂದಿನಂತೆ ತರಗತಿ ಮುಗಿಸಿಕೊಂಡು ಹಾಸ್ಟಲ್‌ಗೆ ತೆರಳಿದ್ದ ಆತ ಸಂಜೆ 6 ಗಂಟೆ ವೇಳೆಗೆ ಪ್ಲಾಸ್ಟಿಕ್ ವೈರ್ ಬಳಸಿ ಫ್ಯಾನ್‌ಗೆ ನೇಣು ಬಿಗಿದುಕೊಂಡಿದ್ದಾನೆ. ಊಟಕ್ಕೆ ದರ್ಶನ್ ಬರಲಿಲ್ಲವೆಂದು ಸ್ನೇಹಿತರು ಕೊಠಡಿ ಕಡೆಗೆ ಬಂದಾಗ ಶವ ನೇತಾಡುತ್ತಿರುವುದು ತಿಳಿದಿದೆ. ತಕ್ಷಣ ವಾರ್ಡನ್‌ಗೆ ವಿಷಯ ತಿಳಿಸಿ, ನಂತರ ಪೆನ್ಷನ್ ಮೊಹಲ್ಲಾ ಠಾಣೆ ಪೊಲೀಸರು ದೌಡಾಯಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಹಿಮ್ಸ್‌ಗೆ ರವಾನಿಸಿದರು.

ದರ್ಶನ್ ಯಾವಾಗಲೂ ಒಬ್ಬನೇ ಇರುತ್ತಿದ್ದ. ಇಂಜಿನೀಯರ್ ಆಗಬೇಕೆಂಬ ತುಡಿತದಿಂದ ಪೂರ್ತಿ ಸಮಯವನ್ನು ವಿದ್ಯಾಭ್ಯಾಸಕ್ಕಾಗಿ ಮೀಸಲಿಟ್ಟಿದ್ದ. ಆ ಒಂಟಿತನವೇ ಜೀವನದ ಮೇಲೆ ಜಿಗುಪ್ಸೆ ಬರುವಂತೆ ಮಾಡಿದೆ. ಹೀಗಾಗಿ ಆತ್ಮಹತ್ಯೆಯ ನಿರ್ಧಾರ ಕೈಗೊಂಡಿರಬಹುದು ಎನ್ನಲಾಗಿದೆ.

ದರ್ಶನ್ ಆತ್ಮಹತ್ಯೆ ಸುದ್ದಿ ಗೊತ್ತಾಗುತ್ತಿದ್ದಂತೆ ಕಾಲೇಜಿನ ವಿದ್ಯಾರ್ಥಿಗಳು ದೌಡಾಯಿಸಿದರು. ರಾತ್ರಿ 11 ಗಂಟೆ ವೇಳೆಗೆ ಜನಸಂದಣಿ ಹೆಚ್ಚಾಗಿದ್ದರಿಂದ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು ಭೇಟಿ ನೀಡಿ ಮುಂಜಾಗ್ರತಾ ಕ್ರಮ ವಹಿಸಿದ್ದರು. ಹಿಮ್ಸ್‌ನ ಶವಾಗಾರದ ಎದುರು ಮೃತ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ವಿದ್ಯಾರ್ಥಿ ದರ್ಶನ್ ಆತ್ಮಹತ್ಯೆ ಹಿನ್ನಲೆಯಲ್ಲಿ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 15ನೇ ಘಟಿ ಕೋತ್ಸವವನ್ನು ಸೆ. 20ರ ಶನಿವಾರಕ್ಕೆ ಮುಂದೂಡಲಾಗಿದೆ ಎಂದು ಪ್ರಾಂಶುಪಾಲ ಹೆಚ್.ಜೆ.ಅಮರೇಂದ್ರ ಅವರು ತಿಳಿಸಿದ್ದಾರೆ. ದರ್ಶನ್ ನಿಧನಕ್ಕೆ ಕಾಲೇಜು ಆಡಳಿತ ಮಂಡಳಿ ಸಂತಾಪ ಸೂಚಿಸಿದೆ.

# ಜಿಲ್ಲೆಯಲ್ಲಿ ಆನೆಧಾಮ ಸ್ಥಾಪನೆ ಕೈಬಿಡಲು ನಿರ್ಧಾರ


## ಚಿಕ್ಕಮಗಳೂರು ಜಿಲ್ಲೆ ತಣಿಗೆಬೈಲಿನಲ್ಲಿ ಸ್ಥಾಪನೆಗೆ ಒಪ್ಪಿಗೆ | ಭೂಮಿ ನೀಡಲು ಮುಂದೆ ಬಂದ ರೈತರಿಗೆ ನಿರಾಸೆ

• ಪ್ರಜೋದಯ ವರದಿ

**ಹಾಸನ:** ಕಾಡಾನೆಗಳ ಹಾವಳಿಯಿಂದ ಕಂಗೆಟ್ಟ ಮಲೆನಾಡು ಭಾಗದ ರೈತರು ಜಮೀನು ನೀಡಲು ಮುಂದೆ ಬಂದಿದ್ದರೂ ಜಿಲ್ಲೆಯಲ್ಲಿ ಆನೆ ವಿಹಾರ ಧಾಮ ಸ್ಥಾಪನೆ ಕಾರ್ಯ ಸಾಧುವಲ್ಲವೆಂದು ಕೈಬಿಡಲಾಗಿದೆ.

ಸಕಲೇಶಪುರ ತಾಲ್ಲೂಕಿನ ಬಿಸ್ಲೆ ಅರಣ್ಯ ಪ್ರದೇಶದ ಬದಲಾಗಿ ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ತಣಿಗೆಬೈಲು ಅರಣ್ಯ ಪ್ರದೇಶದಲ್ಲಿ ಆನೆ ವಿಹಾರಧಾಮ ಆರಂಭಿಸುವುದು ಸೂಕ್ತ ಎಂಬ ತಜ್ಞರ ಅಭಿಪ್ರಾಯದ ಮೇರೆಗೆ ಅರಣ್ಯ ಸಚಿವರು ಹಾಗು ಹಿರಿಯ ಅರಣ್ಯಾಧಿಕಾರಿಗಳು ಸ್ಥಳೀಯರ ಅಭಿಪ್ರಾಯ ಸಂಗ್ರಹಿಸಲು ನಿರ್ಧರಿಸಿದ್ದಾರೆ.

ಹಿರಿಯ ಅರಣ್ಯಾಧಿಕಾರಿಗಳು ನಡೆಸಿದ ಸರ್ವೆ ಹಾಗು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್‌ಸೈನ್ಸ್ ತಜ್ಞರ ಪ್ರಕಾರ ಸಕಲೇಶಪುರ ತಾಲ್ಲೂಕಿನ ಬಿಸಿಲೆ



**ತಣಿಗೆಬೈಲು ಸೂಕ್ತವೆಂಬ ತೀರ್ಮಾನ**

ತರೀಕೆರೆ ತಾಲ್ಲೂಕು ತಣಿಗೆಬೈಲು ಅರಣ್ಯ ಪ್ರದೇಶ ಭದ್ರಾ ಅಭಯಾರಣ್ಯಕ್ಕೆ ಹೊಂದಿಕೊಂಡಂತಿರುವ ಪ್ರದೇಶ. ಇಲ್ಲಿ ಕುರುಚಲು ಕಾಡಿನ ಜೊತೆಗೆ ದಟ್ಟಾರಣ್ಯವೂ ಇದೆ. ಹೀಗಾಗಿ ಕಾಫಿ ತೋಟ ಹಾಗು ಊರಿನ ಅಕ್ಕಪಕ್ಕ ಕಾಣಿಸಿಕೊಳ್ಳುವ ಆನೆಗಳನ್ನು ಸೆರೆ ಹಿಡಿದು ಇಲ್ಲಿ ತಂದು ಬಿಟ್ಟಾಗ ಅವು ಶೀಘ್ರ ಈ ಪರಿಸರಕ್ಕೆ ಹೊಂದಿಕೊಳ್ಳಬಲ್ಲವು. ಆನೆ ವಿಹಾರಧಾಮ ಎಂದು ಘೋಷಣೆ ಮಾಡುವ ಪ್ರದೇಶದ ಸುತ್ತಲೂ ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಮಾಡಲು ಇಲ್ಲಿ ಸಾಕಷ್ಟು ಅನುಕೂಲವಿದೆ ಎಂಬ ಅಭಿಪ್ರಾಯ ಕೇಳಿ ಬಂದಿದೆ. ಹೀಗಾಗಿ ಇದೀಗ ತಣಿಗೆಬೈಲು ಅರಣ್ಯ ವ್ಯಾಪ್ತಿಯಲ್ಲೇ ಆನೆ ವಿಹಾರಧಾಮ ಆರಂಭಿಸಬಹುದೆಂಬ ತೀರ್ಮಾನಕ್ಕೆ ಬರಲಾಗಿದೆ.

ರಕ್ಷಿತಾರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಆನೆ ವಿಹಾರಧಾಮ ಸ್ಥಾಪಿಸಲು ಸಾಧ್ಯವಿಲ್ಲ. ಅಲ್ಲಿರುವ ಕಡಿದಾದ ಬೆಟ್ಟಗಳು ಆನೆಗಳ ಸಂಚಾರಕ್ಕೆ ಅಡಚಣೆ ಮಾಡುತ್ತವೆ. ಆನೆಗಳ ಹಾವಳಿ ಸುಬ್ರಹ್ಮಣ್ಯ ಭಾಗದಲ್ಲೂ ಹೆಚ್ಚಾಗುವ ಸಾಧ್ಯತೆ ಇದೆ ಎಂಬ ಕಾರಣ ನೀಡಿ ಕೈಬಿಡಲಾಗಿದೆ.

ರಾಜ್ಯದಲ್ಲಿ ದಿನೇದಿನೇ ಕಾಡಾನೆಗಳ ಹಾವಳಿ ಹೆಚ್ಚಾಗುತ್ತಿದ್ದು, ಆನೆಗಳನ್ನು ಸೆರೆ ಹಿಡಿದು, ಸಂರಕ್ಷಿತ ಪ್ರದೇಶದಲ್ಲಿ ಮುಕ್ತವಾಗಿ ಬಿಡುವ ಉದ್ದೇಶದಿಂದ ಆನೆ ವಿಹಾರ ಧಾಮ (ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್) ಸ್ಥಾಪನೆ ಕುರಿತು ಸಚಿವ ಸಂಪುಟದಲ್ಲಿಯೇ ತೀರ್ಮಾನ ಕೈಗೊಳ್ಳಲಾಗಿತ್ತು. ಸಕಲೇಶಪುರ, ಭದ್ರಾ ಅಭಯಾರಣ್ಯ ವ್ಯಾಪ್ತಿಯ ಮುತ್ತೋಡಿ ಅರಣ್ಯ ಪ್ರದೇಶ ಹಾಗು ಭದ್ರಾ ಅಭಯಾರಣ್ಯಕ್ಕೆ ಹೊಂದಿಕೊಂಡಿರುವ ತಣಿಗೆಬೈಲು ಅರಣ್ಯ ವ್ಯಾಪ್ತಿಯಲ್ಲಿ ತಜ್ಞರು ಹಾಗು ಹಿರಿಯ ಅರಣ್ಯಾಧಿಕಾರಿಗಳು ಸರ್ವೆ ನಡೆಸಿದ್ದರು.

ಸರ್ವೆ ವರದಿಯಂತೆ ಆರಂಭದಲ್ಲಿ ಮುತ್ತೋಡಿ ಅರಣ್ಯದಲ್ಲಿ ಆನೆ ವಿಹಾರಧಾಮ ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ, ಇಲ್ಲಿ ಆನೆ ವಿಹಾರ ಧಾಮ ಆರಂಭಿಸಿದರೆ ಸಮಸ್ಯೆ ಹೆಚ್ಚು ಎನ್ನುವ ಕಾರಣಕ್ಕೆ ತಣಿಗೆಬೈಲು ವ್ಯಾಪ್ತಿಯಲ್ಲಿ ಆರಂಭಿಸುವುದು ಸೂಕ್ತ ಎನ್ನುವ ಅಭಿಪ್ರಾಯ ತಜ್ಞರಿಂದ ಕೇಳಿ ಬಂದಿದ್ದು, ಅರಣ್ಯ ಸಚಿವರೂ ಒಪ್ಪಿಗೆ ಸೂಚಿಸಿದ್ದಾರೆ. ಈ ಬಗ್ಗೆ ಏಕಾಏಕಿ ತೀರ್ಮಾನ ಕೈಗೊಳ್ಳುವ

» ನಾಲ್ಕನೇ ಪುಟದಲ್ಲಿ

# ಆದಾಯಕ್ಕಿಂತ ಅಧಿಕ ಆಸ್ತಿ: ಕೆ.ಪಿ.ಹೊನಕೇರಿಗೆ ಕಾರಾಗೃಹ ಶಿಕ್ಷೆ

## 17 ವರ್ಷಗಳ ಬಳಿಕ ತೀರ್ಪು | 2 ವರ್ಷ ಜೈಲು, 50 ಸಾವಿರ ರೂ. ದಂಡ | ಲೋಕಾಯುಕ್ತ ವಿರುದ್ಧವೇ ತಿರುಗಿ ಬಿದ್ದಿದ್ದ ಅಧಿಕಾರಿ

• ಪ್ರಜೋದಯ ವರದಿ

**ಹಾಸನ:** ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾಧಿಕಾರಿ ಕಚೇರಿಯ ಹಿರಿಯ ಕೇಂದ್ರ ಸ್ಥಾನಿಕ ಸಹಾಯಕ ಕೆ.ಪಿ.ಹೊನಕೇರಿ ಅವರಿಗೆ 2 ವರ್ಷ ಕಾರಾಗೃಹ ಶಿಕ್ಷೆ ಹಾಗು 50 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಲಯ ಶುಕ್ರವಾರ ಶಿಕ್ಷೆ ಪ್ರಕಟಿಸಿದೆ.

ಪ್ರಕರಣ ದಾಖಲಾದ 17 ವರ್ಷಗಳ ಬಳಿಕ ತೀರ್ಪು ಹೊರ ಬಿದ್ದಿದೆ. 2008ರ ಮಾ.26 ರಂದು ಲೋಕಾಯುಕ್ತ ಪೊಲೀಸರು ಕೆ.ಪಿ.ಹೊನಕೇರಿ ನಿವಾಸದ ಮನೆ ಮೇಲೆ ದಾಳಿ ನಡೆಸಿ ಆದಾಯಕ್ಕಿಂತ ಅಧಿಕ ಆಸ್ತಿ ಗಳಿಸಿದ ಆರೋಪದಡಿ ಕರ್ನಾಟಕ ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರ ಅಡಿ ದೂರು ದಾಖಲಿಸಿದ್ದರು.

ತನಿಖಾಧಿಕಾರಿಯಾಗಿದ್ದ ಲೋಕಾಯುಕ್ತ ಪೊಲೀಸ್ ನಿರೀಕ್ಷಕ ರುದ್ರಮುನಿ ಅವರು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಲೋಕಾಯುಕ್ತ ಸಂಸ್ಥೆಯ ಪರವಾಗಿ ವಿಶೇಷ ಅಭಿಯೋಜಕ ಪರಶುರಾಮ್ ವಾದ ಮಂಡಿಸಿದ್ದರು.

ಕಲಬುರಗಿ ಜಿಲ್ಲೆ ಅಫಜಲ್‌ಪುರ ಮೂಲದ ಕೆ.ಪಿ.ಹೊನಕೇರಿ ಸುಮಾರು 30 ವರ್ಷಗಳ ಕಾಲ ಹಾಸನದಲ್ಲೇ ಸೇವೆ ಸಲ್ಲಿಸಿದ್ದಾರೆ. 10 ವರ್ಷಗಳ ಹಿಂದೆ ಸೇವೆಯಿಂದ ನಿವೃತ್ತರಾಗಿದ್ದಾರೆ.

**ದ್ವೇಷದ ದಾಳಿ ಎಂದಿದ್ದ ಹೊನಕೇರಿ**

ಅಫಜಲ್‌ಪುರ ಮೂಲದ ಕೆ.ಪಿ. ಹೊನಕೇರಿ ಸರ್ಕಾರಿ ಸೇವೆಗೆ ಸೇರಿದ ಬಳಿಕ ಹಾಸನದಲ್ಲೇ ನೆಲಯೂರಿದ್ದಾರೆ. ಅವರ ಹೆಂಡತಿ ಹಾಸನದವರೇ ಆದ್ದರಿಂದ ಇಲ್ಲಿಯೇ ಮನೆ ನಿರ್ಮಿಸಿಕೊಂಡಿದ್ದಾರೆ. ಆರಂಭದಲ್ಲಿ ಮಾವನ ಮನೆಯಲ್ಲಿದ್ದ ಅವರು ನಂತರ ಸ್ವಂತ ಮನೆ ಹೊಂದಿದರು. ಹೊನಕೇರಿ ಅಪರ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಲೋಕಾಯುಕ್ತರಾಗಿದ್ದ ವೆಂಕಟಾಚಲ ಅವರು ಜಿಲ್ಲಾ ಪ್ರವಾಸ ಕೈಗೊಂಡಿದ್ದರು. ಅವರ ಊಟದ ಮೆನುವನ್ನು ಮಾಧ್ಯಮಗಳಿಗೆ ಸೋರಿಕೆ ಮಾಡಲಾಗಿತ್ತು. ಗಣ್ಯ ವ್ಯಕ್ತಿಗಳ ಶಿಷ್ಟಾಚಾರ ಪಾಲನೆ ಉದ್ದೇಶದಿಂದ ಸಂಬಂಧಪಟ್ಟ ಅಧಿಕಾರಿಗಳಿಗಷ್ಟೇ ಮಾಹಿತಿ ನೀಡಲಾಗುತ್ತದೆ. ಲೋಕಾಯುಕ್ತರು ಪ್ರವಾಸದ ಸಂದರ್ಭದಲ್ಲಿ ಯಾವ ಆಹಾರ ಸೇವಿಸುತ್ತಾರೆಂಬುದು ಆಗ ಭಾರೀ ಸುದ್ದಿಯಾಗಿತ್ತು. ಪತ್ರಕರ್ತರಿಗೆ ನಾನು ಮೆನು ಕೊಟ್ಟಿಲ್ಲ. ಆದರೂ ನನ್ನ ಮೇಲೆ ಸುಳ್ಳು ಆರೋಪದಿಂದ ಲೋಕಾಯುಕ್ತ ದಾಳಿ ನಡೆಸಲಾಗಿದೆ ಎಂದು ಹೊನಕೇರಿ ಸಮರ್ಥಿಸಿಕೊಂಡಿದ್ದರು. ತಾನು ಅತ್ಯಂತ ಪ್ರಾಮಾಣಿಕ ಅಧಿಕಾರಿ ಎಂದು ಪದೇ ಪದೇ ಹೇಳಿಕೊಳ್ಳುತ್ತಿದ್ದರು. ಮೂರು ದಶಕಗಳ ಹಾಸನದಲ್ಲೇ ಕರ್ತವ್ಯ ನಿರ್ವಹಿಸಿದ್ದ ಅವರ ವಿರುದ್ಧ ಸಾರ್ವಜನಿಕ ವಲಯದಲ್ಲಿ ಭಾರೀ ವಿರೋಧವಿತ್ತು. ಭ್ರಷ್ಟಾಚಾರಕ್ಕೆ ಸಾರ್ವಜನಿಕರು ನಲುಗಿ ಹೋಗಿದ್ದರು. ಅಧಿಕಾರಿ ವಿರುದ್ಧ ಗಂಭೀರ ಆರೋಪಗಳಿದ್ದವು. ಜನರ ದೂರು ಆಧರಿಸಿ ಅಂದಿನ ಲೋಕಾಯುಕ್ತ ಪೊಲೀಸ್ ನಿರೀಕ್ಷಕ ರುದ್ರಮುನಿ ಅವರ ನೇತೃತ್ವದಲ್ಲಿ ದಾಳಿ ನಡೆಸಲಾಗಿತ್ತು.

## ಸಹಕಾರ ಕ್ಷೇತ್ರ ಗಣಕೀಕರಣಗೊಳಿಸುವತ್ತ ಹೆಜ್ಜೆ

### ಕೇಂದ್ರದ ಕ್ರಮ ಶ್ಲಾಘಿಸಿದ ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್



• ಪ್ರಜೋದಯ ವರದಿ

**ಸಕಲೇಶಪುರ:** ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿರುವ ಅವ್ಯವಹಾರ ತಡೆಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಸಹಕಾರಿ ಕ್ಷೇತ್ರವನ್ನು ಸಂಪೂರ್ಣ ಗಣಕೀಕರಣಗೊಳಿಸಲು ಹೆಜ್ಜೆ ಇಟ್ಟಿರುವುದು ಒಳ್ಳೆಯ ಬೆಳವಣಿಗೆ ಎಂದು ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜ್ ಅವರು ಶ್ಲಾಘಿಸಿದರು.

ತಾಲ್ಲೂಕಿನ ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, ರೈತರ ಜೀವನೋಪಾಯ ಸುಧಾರಣೆಗೆ ಸಹಕಾರಿ ಸಂಘಗಳು ಮಹತ್ತರ ಪಾತ್ರ ವಹಿಸುತ್ತಿವೆ.

» ನಾಲ್ಕನೇ ಪುಟದಲ್ಲಿ

## ಇಂದು ಅಭಿನಂದನಾ ಸಮಾರಂಭ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಚೈತ್ರ ನಾಯಕಹಳ್ಳಿ ಅವರಿಗೆ ಶನಿವಾರ ಅಭಿನಂದನಾ ಸಮಾರಂಭವನ್ನು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಎನ್. ಬಲರಾಮ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೃಷ್ಣೇಗೌಡ, ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಹೆಚ್.ಪಿ.ಮದನಗೌಡ, ಜಿಲ್ಲಾ ಮತ್ತು ಪ್ರಾದೇಶಿಕ ಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯಾಧ್ಯಕ್ಷ ಜೆ.ಆರ್. ಕೆಂಚೇಗೌಡ, ಪತ್ರಕರ್ತ ರವಿ ನಾಕಲಗೂಡು ಮತ್ತಿತರರು ಭಾಗವಹಿಸಲಿದ್ದಾರೆ.

### ಗಣತಿಯಿಂದ ಹೊರಗುಳಿಯದಂತೆ ಅಲೆಮಾರಿ, ಗುಡಿಸಲು ವಾಸಿಗಳ ಮೇಲೆ ನಿಗಾ | 4746 ಶಿಕ್ಷಕರ ನಿಯೋಜನೆ

# ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗೆ ಜಿಲ್ಲಾಡಳಿತ ಸನ್ನದ್ಧ

• ಪ್ರಜೋದಯ ವರದಿ

ಹಾಸನ: ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಸೆ.22 ರಿಂದ ಅ.7ರ ವರೆಗೆ ಕೈಗೊಂಡಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಗಣತಿ)ಗೆ ಜಿಲ್ಲೆಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಅದರಲ್ಲೂ ಸೂರಿಲ್ಲದೆ ಗುಡಿಸಲು, ಟೆಂಟ್‌ಗಳಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ಸಮೀಕ್ಷೆಯಿಂದ ಹೊರಗುಳಿಯಬಾರದೆಂಬ ಉದ್ದೇಶದಿಂದ ವಿಶೇಷ ಗಮನ ಹರಿಸಲಾಗಿದೆ.

ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಗುಡಿಸಲು ಮತ್ತು ಟೆಂಟ್‌ಗಳ ನಿರ್ಮಿಸಿಕೊಂಡು ಬದುಕು ನಡೆಸುತ್ತಿರುವ ಕುಟುಂಬಗಳನ್ನು ಪಟ್ಟಿ ಮಾಡಿದೆ. ಅರಕಲಗೂಡಿನಲ್ಲಿ 11 ಕುಟುಂಬ, ಅರಸೀಕೆರೆಯಲ್ಲಿ 9 ಪ್ರದೇಶ, ಸಕಲೇಶಪುರದಲ್ಲಿ 931 ಮನೆ, ಬೇಲೂರಿನಲ್ಲಿ 47 ಮನೆ, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 1058 ಕುಟುಂಬ, ಹಾಸನದಲ್ಲಿ 831 ಕುಟುಂಬಗಳನ್ನು ಗುರುತಿಸಿದೆ.

**ಒಟ್ಟು 5,47,325 ಕುಟುಂಬ**

ಸಮೀಕ್ಷೆ ಪೂರ್ವ ತಯಾರಿಗಾಗಿ ವಿದ್ಯುತ್



ಇಲಾಖೆ ಸಿಬ್ಬಂದಿಗೆ ವಹಿಸಲಾಗಿದ್ದ ಜಿಯೋ ಟ್ಯಾಗಿಂಗ್ ಕಾರ್ಯ ಪೂರ್ಣಗೊಂಡಿದ್ದು, ಜಿಲ್ಲೆಯ 5,47,325ಕ್ಕೂ ಹೆಚ್ಚು ಕುಟುಂಬಗಳ ಸಮೀಕ್ಷೆ ಸೆ.22ರಿಂದ ಆರಂಭವಾಗಲಿದೆ.

ಜಿಲ್ಲೆಯ ಸೆಸ್ಕಾಂ ಮೀಟರ್ ರೀಡರ್‌ಗಳು ಆ.23 ರಿಂದ ಆರಂಭಿಸಿದ ಜಿಯೋ ಟ್ಯಾಗಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ. ಸಮೀಕ್ಷೆಯಿಂದ ಯಾರೂ ಹೊರಗುಳಿಯಬಾರದೆಂಬ ಉದ್ದೇಶದಿಂದ ಪ್ರತಿ ಮನೆ ಬಾಗಿಲಿಗೆ ಸಹ ಸ್ಟಿಕ್ಕರ್ ಅಂಟಿಸಲಾಗಿದೆ.

**ಸಮೀಕ್ಷೆಯಲ್ಲಿ ಕೇಳಲಾಗುವ ಪ್ರಶ್ನೆಗಳು**

ರಾಜ್ಯದ ಪ್ರತಿ ನಾಗರಿಕರ ಶೈಕ್ಷಣಿಕ ವಿದ್ಯಾರ್ಹತೆ, ಸಾಮಾಜಿಕ ಸ್ಥಿತಿಗತಿ, ಮೂಲ ಕಸುಬು, ಪ್ರಸಕ್ತ ನಿರ್ವಹಿಸುತ್ತಿರುವ ಕಸುಬು, ಸರ್ಕಾರಿ ಉದ್ಯೋಗದ ಬಗ್ಗೆ ನಿಖರ ಮಾಹಿತಿ ಕಲೆ ಹಾಕಲು, ವೈಯಕ್ತಿಕ ಜೀವನಕ್ಕೆ ಸಂಬಂಧಿಸಿದ 40 ಪ್ರಶ್ನೆಗಳು ಹಾಗು ಕುಟುಂಬಕ್ಕೆ ಸಂಬಂಧಿಸಿದ 20 ಪ್ರಶ್ನೆಗಳು ಸೇರಿ ಒಟ್ಟು 60 ಪ್ರಶ್ನೆಗಳಿಗೆ ಸಮೀಕ್ಷೆಗೊಳಪಡುವ ಕುಟುಂಬಸ್ಥರು ಉತ್ತರಿಸಬೇಕಾಗುತ್ತದೆ. ಪಟ್ಟಿ ಮಾಡಲಾದ ಮನೆಗಳನ್ನು ಸಮೀಕ್ಷೆ ನಡೆಸಲು 4,746

**ಹಾಸನ ಜಿಲ್ಲೆಯಲ್ಲಿ ಸಮೀಕ್ಷೆಗೆ ಗುರುತಿಸಲಾದ ಕುಟುಂಬಗಳ ಮಾಹಿತಿ**

| ತಾಲ್ಲೂಕು | ನಗರ | ಗ್ರಾಮೀಣ | ಒಟ್ಟು |
|---|---|---|---|
| ಸಕಲೇಶಪುರ | 8,365 | 30,365 | 38,730 |
| ಆಲೂರು | 4,385 | 20,253 | 24,638 |
| ಹಾಸನ | 79,571 | 73,569 | 1,53,140 |
| ಅರಕಲಗೂಡು | 6,294 | 49,924 | 56,218 |
| ಚನ್ನರಾಯಪಟ್ಟಣ | 18,859 | 69,781 | 88,634 |
| ಅರಸೀಕೆರೆ | 17,494 | 68,659 | 86,159 |
| ಹೊಳೆನರಸೀಪುರ | 12,192 | 40,610 | 52,810 |
| ಬೇಲೂರು | 7,400 | 39,616 | 47,016 |
| ಒಟ್ಟು | 1,54,558 | 3,92,787 | 5,47,325 |

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಾಲ್ಗೊಳ್ಳುವ ಸಿಬ್ಬಂದಿಗೆ ಎರಡು ಹಂತದಲ್ಲಿ ತರಬೇತಿ ನೀಡಲಾಗಿದೆ. ಸಾರ್ವಜನಿಕರು ಸಿಬ್ಬಂದಿಗೆ ಸಕಾರಾತ್ಮಕವಾಗಿ ಸ್ಪಂದಿಸಿ ಗಣತಿಗೆ ಸಹಕರಿಸಬೇಕು. ಕೇಳುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಬೇಕೆಂದು ಮನವಿ ಮಾಡುತ್ತೇವೆ.

-ಕುಮಾರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧಿಕಾರಿ

ಸಮೀಕ್ಷಾದಾರರು ಕರ್ತವ್ಯ ನಿರ್ವಹಿಸಲಿದ್ದಾರೆ. ಅವರನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ 480 ಮೇಲ್ವಿಚಾರಕರನ್ನು ನೇಮಿಸಲಾಗಿದೆ. 150 ಮನೆಗಳ ಗುಂಪಿಗೆ ಒಂದು ಬ್ಲಾಕ್‌ನಂತೆ ಒಟ್ಟು 3,689 ಬ್ಲಾಕ್‌ಗಳಾಗಿ ವಿಂಗಡಿಸಲಾಗಿದೆ.

ರಾಜ್ಯದಿಂದ ಆಯ್ಕೆಯಾಗಿರುವ 6 ಮಾಸ್ಟರ್ ತರಬೇತುದಾರರು, ಜಿಲ್ಲೆಯ 100 ತರಬೇತುದಾರರಿಗೆ ಅರಿವು ಮೂಡಿಸಲಾಗಿದೆ. ಅಂತಿಮ ಹಂತದ ಕಾರ್ಯಾಗಾರ ಸೆ.19

» ನಾಲ್ಕನೇ ಪುಟದಲ್ಲಿ

## ಸಿಎಂಗೆ ನಿಂದನೆ: ಮಾಜಿ ಯೋಧನ ಬಂಧನ

• ಪ್ರಜೋದಯ ವರದಿ

**ಹಾಸನ:** ಸಾಮಾಜಿಕ ಜಾಲತಾಣ ಫೇಸ್ ಬುಕ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ



ಅವರ ವಿರುದ್ಧ ಅವಹೇಳನಕಾರಿ ಬರಹ ಹಾಕಿದ್ದ ಪ್ರಕರಣದಲ್ಲಿ ಸಕಲೇಶಪುರ ದ ಮೂಲದ ನಿವೃತ್ತ ಯೋಧನ ನ್ನು ಸಿಸಿಬಿ ಸೈಬರ್ ಪೊಲೀಸರು ಬಂಧಿ ಸಿದ್ದಾರೆ. ವಸಂತ್ ಕುಮಾರ್ (40) ಬಂಧಿತ.

ವಸಂತ್ ಕುಮಾರ್ ಫೇಸ್‌ಬುಕ್‌ನಲ್ಲಿ ಮುಖ್ಯ ಮಂತ್ರಿ ವಿರುದ್ಧ ನಿಂದ ನಾತ್ಮಕ ಕಾಮೆಂಟ್‌ಗಳನ್ನು ಹಾಕಿದ ಬಗ್ಗೆ ದೂರು ದಾಖಲಾಗಿತ್ತು. ದೂರು ಆಧರಿಸಿ ಸಿಸಿಬಿ ಸೈಬರ್ ಅಪರಾಧ ವಿಭಾ ಗವು ತನಿಖೆ ನಡೆಸಿ, ಆರೋಪಿ ಯನ್ನು ಪತ್ತೆ ಹಚ್ಚಿ ಬಂಧಿಸಿ, ಅವರ ಪೋಸ್ಟ್‌ಗಳ ಸಂಪೂರ್ಣ ಮಾಹಿತಿ, ಹಂಚಿಕೆ ಮಾಡಿದವರ ಲಿಂಕ್‌ಗಳು, ಸಂಬಂಧಿಸಿದ ಡಿಜಿಟಲ್ ಸಾಕ್ಷ್ಯ ಗಳನ್ನು ಪರಿಶೀಲಿಸಲಾಗುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಅವಹೇಳನಕಾರಿ, ನಿಂದನಾತ್ಮಕ

» ನಾಲ್ಕನೇ ಪುಟದಲ್ಲಿ

# ಮೊಸಳೆ ಹೊಸಹಳ್ಳಿಯ ಭೀಕರ ಅಪಘಾತ

ಭಾರತ ದೇಶದಲ್ಲಿ ಅತ್ಯಂತ ತುರ್ತಾಗಿ ಆಗಬೇಕಾಗಿರುವ ಕೆಲಸಗಳಲ್ಲಿ ಈ ಕ್ಷಣದ ಪ್ರಮುಖ ವಿಷಯವೆಂದರೆ ವಾಹನ ಚಾಲನಾ ಪರವಾನಗಿ ನೀಡುವ ರೀತಿ ನೀತಿ ನಿಯಮಗಳನ್ನು ಪುನರ್ ಪರಿಶೀಲಿಸಬೇಕಾಗಿದೆ. ಅದನ್ನು ಕೇವಲ ಆರ್ ಟಿ ಓ ಅಧಿಕಾರಿಗಳು ಮಾತ್ರ ನಿರ್ಧರಿಸುವ ಹಂತ ಮೀರಿ ಹೋಗಿದೆ.

ಭಾರತದಲ್ಲಿ ಸರಾಸರಿ ಪ್ರತಿ ಮೂರು ನಿಮಿಷಕ್ಕೆ ಒಬ್ಬರು ಅಪಘಾತದಿಂದ ಸಾಯುತ್ತಿದ್ದಾರೆ. ಇನ್ನೆಷ್ಟೋ ಜನ ಪ್ರತಿ ಕ್ಷಣ ಗಾಯಾಳುವಾಗಿ ಬದುಕನ್ನೇ ದುರಂತಮಯವಾಗಿಸಿಕೊಳ್ಳುತ್ತಿದ್ದಾರೆ. ಇದರ ಪರೋಕ್ಷ ಪರಿಣಾಮ ಅನೇಕ ಕುಟುಂಬಗಳು ತೊಂದರೆಗೆ ಸಿಲುಕಿವೆ. ಹಾಗೆಯೇ ದೇಶದ ಸಾಮಾಜಿಕ ಮತ್ತು ಆರ್ಥಿಕತೆಯ ಮೇಲೆ ಬಹಳ ದೊಡ್ಡ ದುಷ್ಪರಿಣಾಮ ಬೀರುತ್ತಿದೆ. ಜೊತೆಗೆ ರಸ್ತೆಯಲ್ಲಿ ಪ್ರಯಾಣಿಸುವ ವ್ಯಕ್ತಿಯ ಮಾನಸಿಕತೆಯೂ ಕುಸಿಯುತ್ತಿದೆ. ಏಕೆಂದರೆ ಮನೆಯಿಂದ ಆಚೆ ಹೋದ ವ್ಯಕ್ತಿ ಮತ್ತೆ ಮನೆಗೆ ವಾಪಸ್ ಬರುವವರೆಗೆ, ಅದರಲ್ಲೂ ಮುಖ್ಯವಾಗಿ ದೂರದ ಪ್ರಯಾಣವಿದ್ದಾಗ ಮನೆಯವರಿಗೆ ಎದೆ ಡವ ಡವ ಬಡಿದುಕೊಳ್ಳುತ್ತಿರುತ್ತದೆ.

ಅಂದರೆ ಇಷ್ಟೊಂದು ಆತಂಕ, ಅನಿರೀಕ್ಷಿತ ಆಘಾತ ಉಂಟುಮಾಡುವ ವಿಷಯವನ್ನು ದೇಶ ಮತ್ತು ಎಲ್ಲಾ ರಾಜ್ಯಗಳು ಅತ್ಯಂತ ಗಂಭೀರವಾಗಿ ತೆಗೆದುಕೊಳ್ಳಬೇಕಿದೆ. ಹಿಂದೆ ಇದ್ದಂತೆ ಕೇವಲ ಹತ್ತು ಹದಿನೈದು ನಿಮಿಷದಲ್ಲಿ ವ್ಯಕ್ತಿಯೊಬ್ಬ ವಾಹನ ಚಾಲನೆಯ ಸಾಮರ್ಥ್ಯವನ್ನು ಅಧಿಕಾರಿಗಳಿಗೆ ತೋರಿಸಿ ಹತ್ತು ವರ್ಷಗಳ ಅವಧಿಗೆ ಚಾಲನಾ ಪರವಾನಿಗೆ ತೆಗೆದುಕೊಳ್ಳುವ ವಿಧಾನ ತುಂಬಾ ಹಳೆಯದಾಗಿದೆ ಮತ್ತು ಈ ಕ್ಷಣದಲ್ಲಿ ವಿಫಲವಾಗಿದೆ. ಏಕೆಂದರೆ ಜನಸಂಖ್ಯೆ ಹೆಚ್ಚಾಗಿದೆ, ವಾಹನಗಳು ಹೆಚ್ಚಾಗಿವೆ, ರಸ್ತೆಗಳು ಹೆಚ್ಚಾಗಿವೆ. ವಾಹನಗಳ ವೇಗ ಹೆಚ್ಚಾಗಿದೆ. ಸಾರ್ವಜನಿಕರಲ್ಲಿ ಅಸಹನೆ, ಕೋಪ ತಾಪಗಳು ಹೆಚ್ಚಾಗಿದೆ. ತಾಳ್ಮೆ ಕಡಿಮೆಯಾಗಿದೆ. ಅದರಿಂದಾಗಿ ಅಪಘಾತಗಳು ಹೆಚ್ಚುತ್ತಿವೆ. ಈಗ ಪರಿವರ್ತನೆಯ ಅವಶ್ಯಕತೆ ಇದೆ.

ಹಾಸನ ಜಿಲ್ಲೆಯ ಮೊಸಳೆ ಹೊಸಹಳ್ಳಿಯಲ್ಲಿ ಆದ ಅಪಘಾತ ನಿಜಕ್ಕೂ ಮನಸ್ಸಿಗೆ ಬಹಳ ಘಾಸಿ ಉಂಟು ಮಾಡಿದೆ. ಈ ರೀತಿಯ ಅಪಘಾತಗಳನ್ನು ತಡೆಯುವ ಮತ್ತು ಕನಿಷ್ಠ ಪ್ರಮಾಣಕ್ಕೆ ಇಳಿಸುವ ಮುಖ್ಯವಾಗಿ ಚಾಲನಾ ಪರವಾನಿಗೆ ನೀಡುವ ವಿಧಿ ವಿಧಾನಗಳನ್ನು ಪುನರ್ ವಿಮರ್ಶೆಗೆ ಒಳಪಡಿಸಿ ಸಾಕಷ್ಟು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಜೊತೆಗೆ ಅಪಘಾತಗಳು ಸಂಭವಿಸಿದಾಗ ಚಾಲನಾ ಪರವಾನಗಿಯನ್ನು ದೀರ್ಘಕಾಲದವರೆಗೆ ರದ್ದುಪಡಿಸುವ ಅಥವಾ ಅವರಿಗೆ ಮತ್ತೆ ಪುನರ್ ತರಬೇತಿ ಕೊಡುವ ಅಥವಾ ಅವರನ್ನು ಶಾಶ್ವತವಾಗಿ ಚಾಲನೆಯಿಂದ ದೂರ ಇಡುವ ವಿಧಾನಗಳನ್ನು ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಿ ಗಂಭೀರ ಕ್ರಮ ಕೈಗೊಳ್ಳಬೇಕಿದೆ.

ಇಲ್ಲದಿದ್ದರೆ ಈ ದೇಶದಲ್ಲಿ ಹೇಗೆ ಕ್ಯಾನ್ಸರ್, ಹೃದ್ರೋಗ, ಅಪರಾಧ, ಆತ್ಮಹತ್ಯೆಗಳು ಸಹಜವಾಗುತ್ತಿದೆಯೋ ಅದರ ಪಟ್ಟಿಗೆ ಅಪಘಾತಗಳು ಈಗಾಗಲೇ ಸೇರಿದೆ. ಅದು ಮತ್ತಷ್ಟು ದೇಶದ ಅಭಿವೃದ್ಧಿಗೆ ಮಾರಕವಾಗುವುದು ನಿಶ್ಚಿತ. ಅಪಘಾತವಾಗಲು ಅತಿ ಹೆಚ್ಚು ಕಾರಣ ವಾಹನ ಚಾಲಕರ ಅಹಂಕಾರ, ನಿರ್ಲಕ್ಷ್ಯ, ಬೇಜವಾಬ್ದಾರಿ ಆಗಿರುತ್ತದೆ. ಚಾಲನಾ ಸಮಯದಲ್ಲಿ ವಾಹನದ ತಾಂತ್ರಿಕತೆಗಿಂತ ವ್ಯಕ್ತಿಗಳೇ ಹೆಚ್ಚು ಮುಖ್ಯವಾಗಿರುತ್ತಾರೆ. ಚಾಲನೆ ಎಂಬುದು ಒಂದು ಕಲೆ ಮತ್ತು ವಿಜ್ಞಾನ.

ಪೂರ್ಣ ಪ್ರಮಾಣದಲ್ಲಿ ಒಬ್ಬ ವ್ಯಕ್ತಿಗೆ ಚಾಲನಾ ಪರವಾನಿಗೆ ನೀಡಬೇಕಾದರೆ ವಿವಿಧ ಹಂತಗಳನ್ನು, ವಿವಿಧ ರೀತಿಯ ಮಾನಸಿಕ ಮತ್ತು ದೈಹಿಕ ಪರೀಕ್ಷೆಗಳನ್ನು ನಡೆಸಬೇಕು ಮತ್ತು ಕನಿಷ್ಠ ಎರಡು ವರ್ಷಕ್ಕೊಮ್ಮೆಯಾದರೂ ಅದನ್ನು ಪುನರ್ ಅವಲೋಕನಕ್ಕೆ ಒಳಪಡಿಸಬೇಕು. ಮತ್ತೆ ಇದನ್ನೇ ಒಂದು ದಂಧೆ ಮಾಡಿಕೊಳ್ಳಬಾರದು. ಭ್ರಷ್ಟಾಚಾರವನ್ನು ಪ್ರೋತ್ಸಾಹಿಸಬಾರದು. ಸರಳವಾಗಿ, ಶೀಘ್ರವಾಗಿ ಈ ಕ್ರಿಯೆ ಸುಲಭವಾಗಿ ಎಲ್ಲ ಸ್ಥಳಗಳಲ್ಲೂ ಕೈಗೆಟುಕುವ ರೀತಿಯಲ್ಲಿ ನಿರ್ವಹಿಸಬೇಕು. ಆಗ ಅಪಘಾತಗಳ ಸಂಖ್ಯೆ ಖಂಡಿತ ಕಡಿಮೆ ಆಗುತ್ತದೆ. ಇಲ್ಲದಿದ್ದರೆ ಇನ್ನೂ ಮುಂದೆ ಇದು ನಿಯಂತ್ರಣಕ್ಕೆ ಸಿಗದೇ ತುಂಬಾ ಜನ ಸಾಯಬಹುದಾದ ಸಾಧ್ಯತೆಯೇ ಹೆಚ್ಚು.


ಇದಕ್ಕಾಗಿ ಕೇಂದ್ರ ಸರ್ಕಾರ ತಜ್ಞರನ್ನು ಒಳಗೊಂಡ ಒಂದು ಶಾಶ್ವತ ಅಧ್ಯಯನ ಸಮಿತಿ ರಚಿಸಬೇಕು. ಅದು ನಿರಂತರವಾಗಿ ಕೆಲಸ ಮಾಡುತ್ತಾ ಇರಬೇಕು.

ಚಾಲಕರೆಂಬ ಮಧ್ಯವರ್ತಿ ಜೀವಂತ ವಾಹನಗಳು, ಸಂಪರ್ಕ ಮಾಧ್ಯಮಗಳು ಹಾಗು ಚಾಲನೆ ಎಂಬ ಕಲೆ ಮತ್ತು ವಿಜ್ಞಾನ. ಇಡೀ ದೇಶದಲ್ಲಿ ಅಥವಾ ವಿಶ್ವದಲ್ಲಿ ಮನುಷ್ಯರ ನಡುವಿನ ಸಂಪರ್ಕ ಸೇತುವೆಯಾಗಿ ಕೆಲಸ ಮಾಡುವುದು ಈ ಆಧುನಿಕ ಕಾಲದಲ್ಲಿ ಎಲೆಕ್ಟ್ರಾನಿಕ್ ಮಾಧ್ಯಮದ ಯುಗದಲ್ಲಿ ಟೆಲಿಫೋನ್, ಮೊಬೈಲ್, ಸಾಮಾಜಿಕ ಜಾಲ ತಾಣಗಳು ಮುಂತಾದ ಕೆಲವನ್ನು ಹೆಸರಿಸಲಾಗುತ್ತದೆ. ಆದರೆ ಅದರಷ್ಟೇ ಪ್ರಾಮುಖ್ಯತೆ ಪಡೆದು ಅದಕ್ಕಿಂತ ಪ್ರಮುಖವಾಗಿ ಇಡೀ ಜನ ಸಮೂಹವನ್ನು ಫಿಸಿಕಲಿ ಅಂದ್ರೆ ಭೌತಿಕವಾಗಿ ಒಗ್ಗೂಡಿಸುವುದು ಬೃಹತ್ ಸಂಪರ್ಕ ಜಾಲ ವ್ಯವಸ್ಥೆ ಹೊಂದಿರುವ ಚಾಲಕರು ಎಂಬ ಚಲಿಸುವ ಜೀವಂತ ವಾಹನಗಳು. ಹೌದು, ಖಂಡಿತವಾಗಲೂ ಚಾಲಕರಿಗೆ ಜೀವಂತ ವಾಹನಗಳು ಎಂದು ಆತ್ಮಸಾಕ್ಷಿಯಾಗಿ ಕರೆಯಲೇಬೇಕಾಗುತ್ತದೆ.




ಭಾರತದಂತಹ ಅತ್ಯಂತ ಸಂಕೀರ್ಣ ಭೌಗೋಳಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಚಾಲಕರು ಬಹು ಮುಖ್ಯಪಾತ್ರ ವಹಿಸುತ್ತಾರೆ. ಹೇಗೆ ಶಿಕ್ಷಕರು, ವೈದ್ಯರು, ಸೈನಿಕರು ಮುಂತಾದ ಅತ್ಯಂತ ಅವಶ್ಯಕ ವೃತ್ತಿಗಳಂತೆ ಚಾಲನಾ ವೃತ್ತಿಯು ಒಂದು ಮತ್ತು ಚಾಲಕರು ಅತ್ಯಂತ ಮಹತ್ವ ಪಡೆದಿದ್ದಾರೆ. ಚಾಲಕರಿಲ್ಲದ ದೇಶವನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಹಾಗೆಯೇ ಚಾಲಕರಿಲ್ಲದೆ ದೇಶವನ್ನು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ. ಅಷ್ಟೊಂದು ಮಹತ್ವದ ಪಾತ್ರ ನಿರ್ವಹಿಸುವುದು ಚಾಲಕರು. ಹಾಗಾದರೆ ಭಾರತದಲ್ಲಿ ಚಾಲಕರ ಪರಿಸ್ಥಿತಿ ಹೇಗಿದೆ ? ಆತ್ಮ ವಂಚನೆ ಮಾಡಿಕೊಳ್ಳದೆ ಈ ವಿಷಯವನ್ನು ಸೂಕ್ಷ್ಮವಾಗಿ, ಸಂವೇದನಾಶೀಲರಾಗಿ ಗಮನಿಸ ಬೇಕಾಗುತ್ತದೆ.





ಸಾಮಾನ್ಯವಾಗಿ ಚಾಲಕ ವೃತ್ತಿ ಒಂದು ರೀತಿ ಎರಡನೆಯ ದರ್ಜೆಯ ವೃತ್ತಿಯಂತೆ ಮತ್ತು ಚಾಲಕರನ್ನು ಎರಡನೆಯ ದರ್ಜೆಯ ಪ್ರಜೆಗಳಂತೆ ನೋಡಲಾಗುತ್ತದೆ. ಅಂದರೆ ಸಾಮಾನ್ಯವಾಗಿ ಬಹುತೇಕ ಎಲ್ಲರೂ ಅಲ್ಲ, ಕೆಲವರು ಏಕವಚನದಲ್ಲಿಯೇ ಮಾತನಾಡಿಸುತ್ತಾರೆ ಮತ್ತು ಚಾಲಕರು ಎಂಬ ವೃತ್ತಿ ಅಷ್ಟೇನೂ ಪ್ರಾಮುಖ್ಯವಲ್ಲದ, ಕೆಲವೊಮ್ಮೆ ಕೂಲಿ ಕಾರ್ಮಿಕರಂತೆ ನಡೆಸಿಕೊಳ್ಳುವುದೂ ಉಂಟು. ಅದಕ್ಕೆ ಕಾರಣ ಚಾಲಕರ ಸಾಮಾಜಿಕ ಮತ್ತು ಶೈಕ್ಷಣಿಕ ಹಾಗೂ ಆರ್ಥಿಕ ಪರಿಸ್ಥಿತಿಗಳು. ಈ ಮೂರು ಪ್ರಮುಖ ಕಾರಣಗಳಿಂದಾಗಿ ಚಾಲಕರನ್ನು ಸ್ವಲ್ಪ ಕೆಳಮಟ್ಟದಲ್ಲಿ ಗುರುತಿಸಲಾಗುತ್ತದೆ. ಚಾಲಕರು ಸ್ವಲ್ಪಮಟ್ಟಿಗೆ ಸಂಘಟಿತರಾದರೂ ಬಹುತೇಕ ಅಸಂಘಟಿತ ಕಾರ್ಮಿಕರೆಂದೇ ಕರೆಯಬೇಕಾಗುತ್ತದೆ.

ಏಕೆಂದರೆ ಚಾಲಕ ವೃತ್ತಿ ತುಂಬಾ ವೈವಿಧ್ಯಮಯ ವಾಗಿದೆ. ಸಣ್ಣ ವಾಹನಗಳಿಂದ ಪ್ರಾರಂಭವಾಗಿ ಖಾಸಗಿ ಮತ್ತು ವಾಣಿಜ್ಯ ವಾಹನಗಳ ಚಾಲನೆ, ಸರ್ಕಾರಿ ವಾಹನ ಚಾಲಕರು, ವೈಯಕ್ತಿಕವಾಗಿ ಒಬ್ಬ ವ್ಯಕ್ತಿ, ಒಂದು ಕುಟುಂಬ ಅಥವಾ ಒಂದು ಸಂಸ್ಥೆಗೆ ಚಾಲನೆ ಮಾಡುವ ರೀತಿಯಲ್ಲಿ ವಿಭಿನ್ನತೆ ಹೊಂದಿರುವುದರಿಂದ ಮತ್ತು ಚಾಲಕರ ವೇತನದಲ್ಲಿ ಸಹ ಸಾಕಷ್ಟು ವ್ಯತ್ಯಾಸ ಇರುವುದರಿಂದ ಚಾಲಕರು ಒಂದು ಸಂಘಟನಾತ್ಮಕವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಹಾಗೆಯೇ ಚಾಲಕರಿಗೆ ಸಮಯದ ಒತ್ತಡ ತುಂಬಾ ಇದೆ. ಇಂದಿನ ಆಧುನಿಕ ಕಾಲದಲ್ಲಿ ಹೆಚ್ಚು ಟ್ರಾಫಿಕ್ ಸಮಸ್ಯೆಯಿಂದ ಚಾಲಕರು ಬಹಳಷ್ಟು ಸಮಯವನ್ನು ರಸ್ತೆಗಳಲ್ಲಿಯೇ ಕಳೆಯುತ್ತಾರೆ ಮತ್ತು ಬಹುದೂರದ ಪ್ರಯಾಣವನ್ನು ಸಹ ಮಾಡಬೇಕಾಗಿರುವುದರಿಂದ ಚಾಲಕರಲ್ಲಿ ಸಮಯದ ಅಭಾವ ಬಹುಮುಖ್ಯ ಪಾತ್ರ ವಹಿಸುತ್ತಿದೆ.

ಹಾಗೆಯೇ ಒಂದು ರೀತಿಯಲ್ಲಿ ಚಾಲಕರಲ್ಲಿ ಸಾಮಾನ್ಯ ಜನರಿಗಿಂತ ಆರೋಗ್ಯದ ಸಮಸ್ಯೆ ಎರಡು ಪಟ್ಟು ಹೆಚ್ಚಾಗಿರುತ್ತದೆ. ಏಕೆಂದರೆ ಚಾಲನೆ ಎಂಬುದು ಅತ್ಯಂತ ಒತ್ತಡದ ಕೆಲಸ ಮತ್ತು ನಮಗೆಲ್ಲಾ ತಿಳಿದಿರುವಂತೆ ಕೃತಜ್ಞತೆ ಇಲ್ಲದ ಕೆಲಸವೂ ಹೌದು. ಚಾಲಕರಿಗೆ ಕೃತಜ್ಞತಾ ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸುವುದು ತುಂಬಾ ಕಡಿಮೆ. ಆದ್ದರಿಂದ ಈಗಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಚಾಲಕರ ಪರಿಸ್ಥಿತಿಯ ಬಗ್ಗೆ ಶೀಘ್ರವಾಗಿಯೇ ಗಮನಹರಿಸಬೇಕಾಗಿದೆ. ಅವರ ಬದುಕು ಬವಣೆ, ಕುಟುಂಬ, ಸಾಮಾಜಿಕ ಮಾನ್ಯತೆ ಇವುಗಳ ಬಗ್ಗೆ ಮತ್ತು ಇವುಗಳನ್ನು ಮೇಲ್ದರ್ಜೆಗೆ ಏರಿಸಲು ಗಂಭೀರವಾದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

**– ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಜನರ ಪ್ರಾಣಕ್ಕೆ ಬೆಲೆ ಇಲ್ಲವೆ?

ಕರ್ನಾಟಕ ಸೇರಿದಂತೆ ದೇಶಾದ್ಯಂತ ರಸ್ತೆ ಅಪಘಾತಗಳ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದು ಮತ್ತು ಈ ಅವಘಡಗಳಲ್ಲಿ ಸಾವುನೋವಿನ ಪ್ರಮಾಣ ಏರಿಕೆಯಾಗುತ್ತಿರುವುದು ಆತಂಕದ ವಿಚಾರ. ಒಂದೆಡೆ ಅತಿ ವೇಗದ ಚಾಲನೆ ಅಪಘಾತಗಳಿಗೆ ಕಾರಣವಾಗುತ್ತಿದ್ದರೆ, ಮತ್ತೊಂದೆಡೆ ರಸ್ತೆ ಹೊಂಡಗಳು ಜನರ ಪ್ರಾಣ ಕಸಿಯುತ್ತಿವೆ. ಹಾಸನ ಜಿಲ್ಲೆಯ ಮೊಸಳೆಹಳ್ಳಿಯಲ್ಲಿ ಸೆಪ್ಟೆಂಬರ್ 13ರ ಸಂಜೆ ಗಣಪತಿ ವಿಸರ್ಜನೆ ಮೆರವಣಿಗೆಯಲ್ಲಿ ನುಗ್ಗಿಬಂದ ಟ್ರಕ್ 10 ಜನರ ಪ್ರಾಣವನ್ನೇ ಕಸಿದುಕೊಂಡಿದೆ. ಮೃತರಲ್ಲಿ ಬಹುತೇಕರು ಯುವಕರಾಗಿದ್ದು, ತಮ್ಮದಲ್ಲದ ತಪ್ಪಿಗೆ ಪ್ರಾಣ ತೊರೆಯುವಂತಾಗಿದ್ದು ದುರದೃಷ್ಟಕರ. ಯುದ್ಧ, ಭಯೋತ್ಪಾದನೆ ಮತ್ತು ನಕ್ಸಲೀಯರ ವಿಧ್ವಂಸಕ ಕೃತ್ಯದಿಂದ ಸಂಭವಿಸುವ ಸಾವುಗಳಿಗಿಂತಲೂ ದೇಶದಲ್ಲಿ ರಸ್ತೆ ಅಪಘಾತಗಳಲ್ಲಿ ಮೃತಪಡುವವರ ಸಂಖ್ಯೆ ಹೆಚ್ಚಿದೆ ಎಂಬುದು ಪರಿಸ್ಥಿತಿಯ ಗಂಭೀರತೆಗೆ ಸಾಕ್ಷಿ. ದೇಶದಲ್ಲಿ ಅಪಘಾತಗಳು ಹೆಚ್ಚಾಗುತ್ತಿರುವುದಕ್ಕೆ ಸಿವಿಲ್ ಇಂಜಿನಿಯರ್‌ಗಳು ಮತ್ತು ಕನ್ಸಲ್ಟಂಟ್‌ಗಳು ತಯಾರಿಸುತ್ತಿರುವ ದೋಷಪೂರಿತ ರಸ್ತೆ ವಿನ್ಯಾಸಗಳು ಮತ್ತು ವಿಸ್ತೃತ ಯೋಜನಾ ವರದಿಗಳು (ಡಿಟೇಲ್ ಪ್ರಾಜೆಕ್ಟ್ ರಿಪೋರ್ಟ್ಸ್- ಡಿಪಿಆರ್)ೆ ಕಾರಣ ಎಂದು ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಇತ್ತೀಚೆಗೆ ಹೇಳಿದ್ದರು. ರಸ್ತೆ ನಿರ್ಮಾಣ ಉದ್ಯಮದಲ್ಲಿರುವವರು ರಸ್ತೆ ಸುರಕ್ಷತೆ ಹೆಚ್ಚಿಸಲು ಆಧುನಿಕ ತಂತ್ರಜ್ಞಾನ ಮತ್ತು ಪರಿಕರಗಳನ್ನು ಬಳಸಿಕೊಂಡು ಹೊಸ ಕಾರ್ಯತಂತ್ರಗಳನ್ನು ಅಭಿವೃದ್ಧಿಪಡಿಸಬೇಕು ಎಂದೂ ಕರೆ ನೀಡಿದ್ದರು.

ಅಜಾಗರೂಕ ಚಾಲನೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳದೆ ಇರುವುದು ಮತ್ತು ಸಂಚಾರ ಪೊಲೀಸ್ ಇಲಾಖೆಯಲ್ಲಿ ಇರುವ ಲಂಚದ ಹಾವಳಿಯಿಂದ ವ್ಯವಸ್ಥೆ ಹದಗೆಟ್ಟು ಹೋಗಿದ್ದು, ನಿಯಮಗಳಿಗೆ ಬೆಲೆಯೇ ಇಲ್ಲದಂತಾಗಿದೆ. ಹೀಗಾಗಿ ಯಾವುದೇ ತಪ್ಪು ಮಾಡದ ಅಮಾಯಕ ಜನರು ರಸ್ತೆ ಅಪಘಾತದಲ್ಲಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಈ ಸ್ಥಿತಿ ಬದಲಾಗಲೇ ಬೇಕು. ಅತಿ ವೇಗದ ಚಾಲನೆ, ನಿರ್ಲಕ್ಷ್ಯದ ಚಾಲನೆ, ರಾಂಗ್ ವೇಯಲ್ಲಿ ನುಗ್ಗಿ ಬರುವುದು ಹೀಗೆ ಸಂಚಾರ ನಿಯಮಗಳನ್ನು ಸಾರಾಸಗಟಾಗಿ ಉಲ್ಲಂಘಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, ಅಪಘಾತ ಮತ್ತು ಜೀವಹಾನಿಗೆ ಕಾರಣವಾಗುತ್ತಿವೆ. 2024ರಲ್ಲಿ ದೇಶದಲ್ಲಿ 1.68 ಲಕ್ಷ ಜನರು ಅಪಘಾತದಲ್ಲಿ ಪ್ರಾಣ ಕಳೆದುಕೊಂಡಿದ್ದು, ಈ ಪೈಕಿ 30 ಸಾವಿರ ಜನರು ಹೆಲ್ಮೆಟ್ ಧರಿಸದ ಕಾರಣಕ್ಕೆ ಜೀವ ತೆತ್ತಿದ್ದಾರೆ. 2023ರಲ್ಲಿ ರಸ್ತೆ ಅಪಘಾತಗಳಿಗೆ 1.8 ಲಕ್ಷ ಜನ ಬಲಿಯಾಗಿದ್ದಾರೆ. ರಸ್ತೆ ಅಪಘಾತಗಳನ್ನು ನಿಯಂತ್ರಿಸುವಲ್ಲಿ ಸರ್ಕಾರ ಮತ್ತು ಸಾರ್ವಜನಿಕರ ಜಂಟಿ ಹೊಣೆಗಾರಿಕೆ ಇದೆ. ರಸ್ತೆಗಳ ದುಸ್ಥಿತಿ, ವಾಹನ ಸವಾರರ ಅಜಾಗರೂಕ ಚಾಲನೆ, ವಿಶ್ರಾಂತಿ ಇಲ್ಲದೆ ವಾಹನ ಚಲಾಯಿಸುವುದು ಮತ್ತು ಹವಾಮಾನ ವೈಪರೀತ್ಯದಂಥ ಕಾರಣಗಳು ಅಪಘಾತದ ಪ್ರಮಾಣ ಹೆಚ್ಚಿಸುತ್ತಿವೆ. ಜನರು ಕೂಡ ಸಂಚಾರ ನಿಯಮಗಳ ಪಾಲನೆಯಲ್ಲಿ ಯಾವುದೇ ಕಾರಣಕ್ಕೂ ಅಸಡ್ಡೆ ತೋರಬಾರದು, ಅಡ್ಡಾದಿಡ್ಡಿ ಸಂಚರಿಸುವ ವಾಹನ ಚಾಲಕರ ವಿರುದ್ಧ ಸಂಚಾರ ಪೊಲೀಸರು ಮುಲಾಜಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ಮುಖ್ಯವಾಗಿ, ರಸ್ತೆಗಳ ಗುಣಮಟ್ಟ ಹೆಚ್ಚಬೇಕು. ಗುಂಡಿಗಳು ಸೃಷ್ಟಿಸಿರುವ ಗಂಡಾಂತರಗಳಿಂದ ಮಾರಣಾಂತಿಕ ಅಪಘಾತಗಳು ಸಂಭವಿಸಿದ ಹಲವು ನಿದರ್ಶನಗಳಿಗೆ ರಾಜ್ಯ ರಾಜಧಾನಿ ಬೆಂಗಳೂರು ಸಾಕ್ಷಿಯಾಗಿದೆ ಎಂಬುದನ್ನು ಮರೆಯುವಂತಿಲ್ಲ.





## 20–9–2025 ದಿನ ಭವಿಷ್ಯ



**ಮೇಷ:** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು ಮತ್ತು ಒಳ್ಳೆಯ ಆರೋಗ್ಯವನ್ನು ಅನುಭವಿಸುವ ನಿಮ್ಮ ಹಾದಿಯಲ್ಲಿ ಅಡ್ಡ ಬರಬಹುದು. ಇಂದು ನಿಮಗೆ ಹಣದ ಅಗತ್ಯವಿರಬಹುದು ಆದರೆ ಅದು ನಿಮಗೆ ದೊರೆಯುವುದಿಲ್ಲ.



**ವೃಷಭ:** ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿ ಉಳಿಯಲು ವ್ಯಾಯಾಮ ಮಾಡಿ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು. ಆದಾಗ್ಯೂ ಈ ಸಮಯದಲ್ಲಿ ನೀವು ಹಣಕ್ಕಿಂತ ಹೆಚ್ಚಾಗಿ ಅವರ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು.



**ಮಿಥುನ:** ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಇಂದು, ಒಂದು ಪಾರ್ಟಿಯಲ್ಲಿ ನೀವು ಆರ್ಥಿಕ ಭಾಗವನ್ನು ಬಲಪಡಿಸಲು ಪ್ರಮುಖ ಸಲಹೆಯನ್ನು ನೀಡುವ ವ್ಯಕ್ತಿಯನ್ನು ಭೇಟಿ ಮಾಡಬಹುದು. ಕೌಟುಂಬಿಕ ಒತ್ತಡ ನಿಮ್ಮ ಗಮನ ಬೇರೆಡೆಗೆ ಸೆಳೆಯದಿರಲಿ. ಕೆಟ್ಟ ಸಮಯಗಳು ನಮಗೆ ಇನ್ನೂ ಹೆಚ್ಚನ್ನು ನೀಡುತ್ತವೆ.



**ಕರ್ಕಾಟಕ:** ಇಂದು, ನಿಮ್ಮ ಆರೋಗ್ಯವು ಆರೋಗ್ಯಕರವಾಗಿರುತ್ತದೆ ಎಂದು ನಿರೀಕ್ಷಿಸಲಾಗಿದೆ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು ಎಂಬುದು ಇಂದು ನಿಮಗೆ ಅರ್ಥವಾಗಬಹುದು. ನಿಮ್ಮ ಸಂಗಾತಿ ಬೆಂಬಲ ನೀಡುತ್ತಾರೆ ಹಾಗೂ ಸಹಾಯ ಮಾಡುತ್ತಾರೆ.



**ಸಿಂಹ:** ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ. ಇವು ನಿಮಗೆ ನಿಮ್ಮ ಸಹೋದರ ಅಥವಾ ಸಹೋದರಿಯ ಸಹಾಯದಿಂದ ಹಣದ ಲಾಭವಾಗುವ ಸಾಧ್ಯತೆ ಇದೆ ಹಳೆಯ ಸಂಬಂಧಿಗಳು ಅವಿವೇಕದ ಬೇಡಿಕೆಗಳನ್ನು ಮಾಡುವ ಸಾಧ್ಯತೆಯಿದೆ.



ಕನ್ಯಾ: ಅಸಾಧ್ಯವಾದ ಅನಗತ್ಯ ಚಿಂತನೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ನಿಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದರೂ ಹಣದ ಹೊರಹರಿವು ನಿಮ್ಮ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ತೊಂದರೆಯುಂಟುಮಾಡುತ್ತದೆ. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ.



ತುಲಾ: ಉತ್ತಮ ಆರೋಗ್ಯ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಲು ನಿಮ್ಮನ್ನು ಸಕ್ರಿಯಗೊಳಿಸುತ್ತದೆ. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ. ಕುಟುಂಬದ ಸದಸ್ಯರು ನಿಮ್ಮ ನಿರೀಕ್ಷೆಗಳನ್ನು ಪೂರೈಸದಿರಬಹುದು. ನಿಮ್ಮ ಪ್ರೀತಿಪಾತ್ರರಿಗಾಗಿ ವಿಶೇಷ ಯೋಜನೆಗಳನ್ನು ಮಾಡಲು ಮರೆಯಬೇಡಿ.




**ವೃಶ್ಚಿಕ:** ನಿಮ್ಮ ಸಕಾರಾತ್ಮಕ ದೃಷ್ಟಿಕೋನ ನಿಮ್ಮ ಸುತ್ತಲಿನವರನ್ನು ಆಕರ್ಷಿಸಬಹುದು. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ. ನೀವು ಹೆಚ್ಚೇನೂ ಮಾಡದೇ ಇತರರ ಗಮನ ಸೆಳೆಯಲು ಇದೊಂದು ಪರಿಪೂರ್ಣ ದಿನ. ಪ್ರೇಮದಲ್ಲಿ ಗುಲಾಮರಂತೆ ವರ್ತಿಸಬೇಡಿ. ಅಗತ್ಯವಾದ ಕೆಲಸಗಳಿಗೆ ಸಮಯ ನೀಡದೆ ಇರುವುದು



**ಧನು:** ನೀವು ಮಾನಸಿಕವಾಗಿ ಅತ್ಯಂತ ದುರ್ಬಲರಾಗಿರುತ್ತೀರಿ – ಆದ್ದರಿಂದ ನೀವು ನೋವಿಗೀಡಾಗಬಹುದಾದ ಸಂದರ್ಭಗಳಿಂದ ದೂರ ಉಳಿಯಿರಿ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ. ನಿಮ್ಮ ಕಿಟಕಿಯಲ್ಲಿ ಹೂವಿಡುವ ಮೂಲಕ ನಿಮ್ಮ ಪ್ರೀತಿಯನ್ನು ತೋರಿಸಿ.



**ಮಕರ:** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ವಿವಾಹಿತರು ಇಂದು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.



**ಕುಂಭ:** ನಿಮ್ಮ ಅನಿರೀಕ್ಷಿತ ಸ್ವಭಾವ ನಿಮ್ಮ ವೈವಾಹಿಕ ಸಂಬಂಧವನ್ನು ಹಾಳು ಮಾಡಲು ಬಿಡಬೇಡಿ. ಇದನ್ನು ತಡೆಯುವುದನ್ನು ಖಚಿತಪಡಿಸಿಕೊಳ್ಳಿ, ಇಲ್ಲದಿದ್ದಲ್ಲಿ ನೀವು ನಂತರ ವಿಷಾದಪಡಬಹುದು. ಹಣ ನಿಮ್ಮ ಕೈಗಳ ಮೂಲಕ ಸುಲಭವಾಗಿ ಜಾರಿಹೋದರೂ – ನಿಮ್ಮ ಅದೃಷ್ಟದ ತಾರೆಗಳು ನಿಮಗೆ ಹಣಕಾಸು ಸುಲಭವಾಗಿ ದೊರಕುವಂತೆ ಮಾಡುತ್ತದೆ.



**ಮೀನ:** ನೀವು ಸಾಮಾನ್ಯವಾಗಿ ಇರುವುದಕ್ಕಿಂತ ಕಡಿಮೆ ಚೈತನ್ಯವನ್ನು ಇಂದು ಕಾಣುತ್ತೀರಿ ನಿಮ್ಮ ಮೇಲೆ ನೀವೇ ಹೆಚ್ಚುವರಿ ಕೆಲಸಕ್ಕೆ ಒತ್ತಡ ಹೇರಬೇಡಿ – ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ನಿಮ್ಮ ಕೆಲಸಗಳನ್ನು ಇನ್ನೊಂದು ದಿನಕ್ಕೆ ವರ್ಗಾಯಿಸಿ. ನೀವು ಸಂಪ್ರದಾಯಬದ್ಧ ಹೂಡಿಕೆಗಳನ್ನು ಮಾಡಿದಲ್ಲಿ ಒಳ್ಳೆಯ ಹಣ ಮಾಡುತ್ತೀರಿ. ನಿಮ್ಮ ಪ್ರೀತಿಪಾತ್ರರ ಅತೃಪ್ತಿಗೆ ನಿಮ್ಮ ನಗು ನಿಮ್ಮ ಅತ್ಯುತ್ತಮ ಔಷಧವಾಗಿದೆ.

# ಚಾಲಕ – ಚಾಲನಾ ಎಂಬ ವೃತ್ತಿ ಮತ್ತು ಕಲೆ

ಡ್ರೈವಿಂಗ್ ಎಂಬುದು ಒಂದು ಯೋಜನಾ ಬದ್ಧ ಮತ್ತು ಯೋಚನಾ ಬದ್ಧ ವೃತ್ತಿ – ಕಲೆ. ಮುಖ್ಯವಾಗಿ ರಸ್ತೆ ಮೇಲಿನ ವಾಹನಗಳ ಚಾಲನೆಗೆ ಸಂಬಂಧಿಸಿದಂತೆ ಈ ಅಭಿಪ್ರಾಯ.

ಬೆಂಗಳೂರು – ಚೆನ್ನೈ,
ಬೆಂಗಳೂರು – ಮುಂಬಯಿ,
ಬೆಂಗಳೂರು – ಹೈದರಾಬಾದ್,
ಬೆಂಗಳೂರು – ಮೈಸೂರು,
ಬೆಂಗಳೂರು – ಮಂಗಳೂರು,
ಬೆಂಗಳೂರು – ತಿರುಪತಿ

ಸೇರಿ ಯಾವುದೇ ಮುಖ್ಯ ರಸ್ತೆಯಲ್ಲಿ ನೀವು ಪ್ರಯಾಣಿಸಿದರೆ 90–100 ಕಿಲೋಮೀಟರ್ ಒಳಗೆ ಕನಿಷ್ಠ ಒಂದಾದರೂ ಸಣ್ಣ/ದೊಡ್ಡ ಪ್ರಮಾಣದ ಅಪಘಾತವಾಗಿರುವ ದೃಶ್ಯಗಳನ್ನು ದಿನನಿತ್ಯ ಕಾಣಬಹುದು. ಹಾಗೆಯೇ ನಗರ ಪ್ರದೇಶದಲ್ಲಿ ಓಡಾಡುವ ಎಲ್ಲಾ ವರ್ಗದ ಬಹುತೇಕ ವಾಹನಗಳು ಸ್ವಲ್ಪವಾದರೂ ಏಟು ತಿಂದಿರುವ ಲಕ್ಷಣಗಳನ್ನು ಗಮನಿಸಬಹುದು ಮತ್ತು ಅಲ್ಲಿನ ಜನರ ಅಪಘಾತಗಳ ನೆನಪುಗಳನ್ನು ಕೇಳಬಹುದು. ಇಷ್ಟೊಂದು ವ್ಯಾಪಕವಾದ ಅಪಘಾತಗಳಿಗೆ ಅಪರೂಪದ ತಾಂತ್ರಿಕ ಮತ್ತು ಆಕಸ್ಮಿಕ ಅಂಶಗಳನ್ನು ಹೊರತುಪಡಿಸಿ ನಮ್ಮ ಜನಗಳ ಒಟ್ಟು ವ್ಯಕ್ತಿತ್ವವೇ ಬಹುಮುಖ್ಯ ಕಾರಣವಾಗಿದೆ.


ಚಾಲನೆ ಎಂಬುದು ಒಂದು ಕಲಿಕೆಯ ಕ್ರಮ. ಶಿಕ್ಷಣ, ಸಂಗೀತ, ಸಾಹಿತ್ಯ, ಕ್ರೀಡೆ, ನಟನೆಯಂತೆ, ವೈದ್ಯಕೀಯ, ಇಂಜಿನಿಯರಿಂಗ್, ಕಟ್ಟಡ ನಿರ್ಮಾಣ ಮುಂತಾದ ವೃತ್ತಿಗಳಂತೆ ಚಾಲನೆ ಕೂಡ ಅತ್ಯಂತ ಹೆಚ್ಚಿನ ಕುಶಲತೆ ಮತ್ತು ಏಕಾಗ್ರತೆ ಬಯಸುವ ಒಂದು ಕಲೆ ಮತ್ತು ವೃತ್ತಿ. ಕೇವಲ ಒಂದಷ್ಟು ಅಭ್ಯಾಸದ ನಂತರ ಸ್ಟೀರಿಂಗ್ ಹಿಡಿದು ಕ್ಲಚ್ ಮುಖಾಂತರ ಗೇರ್ ಬದಲಾಯಿಸಿ ವಾಹನವನ್ನು ಮುಂದಕ್ಕೆ ಓಡಿಸಿದ ಮಾತ್ರಕ್ಕೆ ಯಾರೂ ಚಾಲಕರಾಗುವುದಿಲ್ಲ. ಏಕೆಂದರೆ ರಸ್ತೆಗಳಲ್ಲಿ ನಾವು ಮಾತ್ರ ಓಡಾಡಲು ಇದು ನಮ್ಮ ಸ್ವಂತ ಆಸ್ತಿಯಲ್ಲ. ಅಲ್ಲಿ ವಾಸಿಸುವ ಪ್ರತಿ ಜೀವಿಗೂ ಅದರಲ್ಲಿ ಪಾಲಿದೆ.

ಚಾಲಕನಾದವನು ಆ ಎಲ್ಲಾ ಸಂಕೀರ್ಣ ವ್ಯವಸ್ಥೆಯನ್ನು ಅರಿತು ಯಾರಿಗೂ ಹಾನಿಯಾಗದಂತೆ ಅತ್ಯಂತ ಎಚ್ಚರಿಕೆಯಿಂದ ವಾಹನ ಮುನ್ನಡೆಸಬೇಕು. ಅದೊಂದು ಯೋಜನಾಬದ್ಧ ಕಲೆಗಾರಿಕೆ. ಆದರೆ ನಮ್ಮಲ್ಲಿ ಈ ಬಗ್ಗೆ ತುಂಬಾ ಕೆಳಮಟ್ಟದ ಭಾವನೆ ಇದೆ. ಯಾರು ಬೇಕಾದರೂ ವಾಹನವನ್ನು ಸುಲಭವಾಗಿ ಚಲಾಯಿಸಬಹುದು ಎಂಬ ಅಭಿಪ್ರಾಯವಿದೆ. ಅದರ ಫಲವೇ ಇಡೀ ದೇಶದಲ್ಲಿ ಪ್ರತಿ ನಿಮಿಷಕ್ಕೆ ಹಲವಾರು ಪ್ರಾಣಗಳ ಮಾರಣ ಹೋಮ.

ಇದಕ್ಕೆ ಕೆಲವು ಉದಾಹರಣೆ ಗಮನಿಸಿ. ಎಷ್ಟೋ ಜನ ವಾಹನ ಖರೀದಿಸಿದ ನಂತರ ಚಾಲನಾ ಪರವಾನಗಿ ಪಡೆದು ಆಮೇಲೆ ರಸ್ತೆಗಳ ಮೇಲೆ ಪ್ರಯೋಗ ಮಾಡುತ್ತಾರೆ. ವಾಹನವನ್ನು ಮುಂದಕ್ಕೆ ಹಿಂದಕ್ಕೆ ಚಲಿಸುವುದು ಕಲಿತ ಮಾತ್ರಕ್ಕೆ ನಮಗೆ ಚಾಲನೆ ಬರುತ್ತದೆ ಎಂದು ತಪ್ಪಾಗಿ ಗ್ರಹಿಸಲಾಗುತ್ತದೆ.

ವಾಣಿಜ್ಯ ವಾಹನಗಳನ್ನು ತೀರ್ಥ ಯಾತ್ರೆಯ ಅಥವಾ ಪ್ರೇಕ್ಷಣೀಯ ಅಥವಾ ಸಮಾರಂಭಗಳಿಗೆ ತೆಗೆದುಕೊಂಡು ಹೋಗುವವರು ಅವರ ಸಮಯದ ಅನುಕೂಲಕ್ಕೆ ತಕ್ಕಂತೆ ಚಾಲಕನ ನಿದ್ರೆ ಮತ್ತು ಊಟವನ್ನು ನಿಯಂತ್ರಿಸುತ್ತಾರೆ. ರಾತ್ರಿ ವೇಳೆ ಪ್ರಯಾಣ ಮಾಡಿ ದಿನವಿಡೀ ಓಡಾಡಿಸಿ ಏನೋ ಮಹಾ ಉಪಕಾರ ಮಾಡಿದಂತೆ ಚಾಲಕರಿಗೆ ಒಂದೆರಡು ಗಂಟೆಗಳ ನಿದ್ರೆಗೆ ಅವಕಾಶ ನೀಡಿ ಮತ್ತೆ ರಾತ್ರಿಯ ವೇಳೆ ವಾಹನ ಚಲಾಯಿಸುವಂತೆ ಮಾಡುತ್ತಾರೆ. ಚಾಲಕ ಏನು ಸೂಪರ್ ಮ್ಯಾನ್ ಅಲ್ಲವಲ್ಲ. ಸಾಮಾನ್ಯವಾಗಿ ಹಗಲಿನಲ್ಲಿ ಎಷ್ಟೇ ನಿದ್ದೆ ಮಾಡಿದರು ರಾತ್ರಿ 12/4 ಗಂಟೆಯ ನಡುವೆ ನಿದ್ರೆ ಎಳೆಯುವುದು ದೇಹದ ಸಹಜ ನಡವಳಿಕೆ.

ದಿನಕ್ಕೆ 8 ಗಂಟೆಗಳು ಮಾತ್ರ ಚಾಲನೆ, ಒಟ್ಟು ಸಮಾಜದ ಮನೋಭಾವ, ವ್ಯಕ್ತಿಗಳ ಸಂಪೂರ್ಣ ಮಾಗಿದ ವ್ಯಕ್ತಿತ್ವ, ಚಾಲನಾ ವೃತ್ತಿಗೆ ಗೌರವ, ಹದ್ದು ಮೀರಿದ ಚಾಲಕನಿಗೆ ತಕ್ಷಣವೇ ಲೈಸೆನ್ಸ್ ಅಮಾನತು, ಖಾಸಗಿ ವಾಹನಗಳ ಊಜಿಣ್ಣಿಭಿಠ ಗೆ ತುಂಬಾ ಮಹತ್ವ ಮುಂತಾದ ಅನೇಕ ಕ್ರಮಗಳನ್ನು ಕೈಗೊಂಡರೆ ಮಾತ್ರ ಅಪಘಾತಗಳು ಕಡಿಮೆಯಾಗಬಹುದು. ಕೇವಲ ಘಟನೆ ನಡೆದಾಗ ಯಾರೋ ಒಬ್ಬ ಕ್ಲೀನರ್ ಅಥವಾ ಡ್ರೈವರ್ ಅಥವಾ ವಾಹನ ಮಾಲೀಕ ಅಥವಾ ರಸ್ತೆ ನಿರ್ಮಿಸಿದವ ಅಥವಾ ವಾಹನ ನಿರ್ಮಿಸಿದವನ ಮೇಲೆ ಕ್ರಮ ಕೈಗೊಂಡರೆ ಅಪಘಾತಗಳು ನಿಲ್ಲುವುದಿಲ್ಲ. ಎಂದಿನಂತೆ ಸಾವು




ಗೋಳಾಟ, ವಿಧಿಲೀಲೆ, ದುರಾದೃಷ್ಟ ಎಂದು ಸಮಾಧಾನ ಮಾಡಿಕೊಳ್ಳಬೇಕಷ್ಟೆ. ನೀವು ಯಾವುದೇ ರೀತಿಯ ವಾಹನ ಚಾಲಕರಾಗಿದ್ದರೂ ದಯವಿಟ್ಟು ವಾಹನ ಚಾಲನೆ ಒಂದು ಬಹುದೊಡ್ಡ ಕಲೆ ಮತ್ತು ಅದೇ ಸಮಯದಲ್ಲಿ ಒಂದು ದೊಡ್ಡ ಜವಾಬ್ದಾರಿ ಎಂಬ ಮನೋಭಾವದಿಂದ ವಾಹನ ಚಲಾಯಿಸಿ. ಆಗ ಕನಿಷ್ಠ ಇದರಿಂದಾಗುವ ಅನಾಹುತ ತಪ್ಪಿಸಬಹುದು.

ಚಾಲಕರ ಕೆಲವು ಪ್ರಮುಖ ಬೇಡಿಕೆಗಳು:

1) ಚಾಲಕರ ಎಲ್ಲಾ ಸಮಸ್ಯೆಗಳ ಪರಿಹಾರ ಒಂದೇ ಕಡೆ ಸಿಗುವಂತೆ ಚಾಲಕ ಅಭಿವೃದ್ಧಿ ಪ್ರಾಧಿಕಾರ ರಚಿಸಬೇಕು

2) ಚಾಲಕರಿಗೆ ಜೀವ ವಿಮೆ ಮತ್ತು ಆರೋಗ್ಯ ವಿಮೆ ಕಡ್ಡಾಯಗೊಳಿಸಬೇಕು. ಅದನ್ನು ಸರ್ಕಾರವೇ ಒಂದು ಯೋಜನೆಯ ಮೂಲಕ ಖಾತರಿ ಪಡಿಸಬೇಕು.

3) ದೇಶದಾದ್ಯಂತ ಸಂಚರಿಸುವ ವಾಹನಗಳ ಚಾಲಕರಿಗೆ ಮಧ್ಯೆ ಮಧ್ಯೆ ವಿಶ್ರಾಂತಿಗಾಗಿ ಚಾಲಕ ವಿಶ್ರಾಂತಿ ಗೃಹಗಳನ್ನು ನಿರ್ಮಿಸಬೇಕು.

4) ಅಪಘಾತದ ಸಂದರ್ಭದಲ್ಲಿ ಚಾಲಕರನ್ನು ಸಾರ್ವಜನಿಕರು ಮನಸೋ ಇಚ್ಛೆ ಹಲ್ಲೆ ನಡೆಸುವುದನ್ನು ನಿಷೇಧಿಸಬೇಕು ಮತ್ತು ಚಾಲಕರನ್ನು ಪೊಲೀಸರಿಗೆ ಒಪ್ಪಿಸುವ ಕೆಲಸವನ್ನು ಮಾತ್ರ ಸಾರ್ವಜನಿಕರು ಮಾಡುವಂತಿರಬೇಕು.

5) ಯಾವುದೇ ಚಾಲಕರನ್ನು ಪೊಲೀಸರಾಗಲಿ, ಸಾರಿಗೆ ಅಧಿಕಾರಿಗಳಾಗಲಿ, ಸಾರ್ವಜನಿಕರೇ ಆಗಲಿ ಏಕವಚನದಲ್ಲಿ ಸಂಬೋಧಿಸುವ ಚಾಳಿಯನ್ನು ನಿಷೇಧಿಸಬೇಕು. ಅವರಿಗೂ ಎಲ್ಲರಂತೆ ಗೌರವ ಮರ್ಯಾದೆ ನೀಡಬೇಕು.

ಚಾಲಕರು ನಿಜಕ್ಕೂ ಸಂಪೂರ್ಣ ನೆಮ್ಮದಿಯಿಂದ ತಮ್ಮ ಕಾರ್ಯ ನಿರ್ವಹಿಸಿದರೆ ರಾಜ್ಯ ಮತ್ತು ದೇಶದ ಪ್ರಗತಿ ಇನ್ನಷ್ಟು ವೇಗ ಪಡೆಯುತ್ತದೆ ಮತ್ತು ಬಲಗೊಳ್ಳುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು, ಕಾರ್ಮಿಕ ಸಚಿವರು, ಸಾರಿಗೆ ಸಚಿವರು ಈ ಬಗ್ಗೆ ಗಮನ ಹರಿಸಿ ಚಾಲನೆ ಚಾಲಕ ಮತ್ತು ಸುರಕ್ಷತೆಗೆ ಮೊದಲ ಆದ್ಯತೆ ಕೊಡಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ.

**– ವಿವೇಕಾನಂದ. ಎಚ್. ಕೆ.,** ಬೆಂಗಳೂರು

# ಗುಪ್ತ ಡೈರಿಯ ರಹಸ್ಯ

ಚೆನ್ನೈನ ಹಳೆಯ, ಭವ್ಯವಾದ ಮನೆಯೊಂದರಲ್ಲಿ ರಾಜೇಂದ್ರ ಎಂಬ ವ್ಯಾಪಾರಿ ವಾಸಿಸುತ್ತಿದ್ದ. ಆ ಮನೆಯ ಲೈಬ್ರರಿಯಲ್ಲಿ ಶತಮಾನಗಳಷ್ಟು ಹಳೆಯ ಪುಸ್ತಕಗಳಿರುವುದು ಅವನ ಹೆಮ್ಮೆ. ಒಂದು ರಾತ್ರಿ, ಧೂಳಿನಿಂದ ಮುಚ್ಚಿದ್ದ ಒಂದು ಡೈರಿಯನ್ನು ಕಂಡ. ಅದರ ಒಳಗೆ ಕೈಬರಹದಲ್ಲಿ: ನನ್ನನ್ನು ಕೊಂದವನು ನನ್ನ ಆತ್ಮೀಯನೇ. ಆದರೆ ಯಾರೆಂದು ತಿಳಿಯಲಿಲ್ಲ. ಎಂದು ಬರೆದಿತ್ತು.

ರಾಜೇಂದ್ರನ ಆಸಕ್ತಿ ಕುದುರಿತು. ಡೈರಿಯ ಪುಟಗಳು 60 ವರ್ಷಗಳ ಹಿಂದಿನ ಕೊಲೆಯ ರಹಸ್ಯವನ್ನು ಬಿಚ್ಚಿಡುತ್ತಿದ್ದವು. ಆದರೆ ಕೊನೆಯ ಪುಟಗಳು ಒಂದಕ್ಕೊಂದು ಅಂಟಿಕೊಂಡಿದ್ದವು, ಅದನ್ನು ಬಿಡಿಸಲು ಬಹಳ ಶ್ರಮ ಪಟ್ಟರೂ ಆಗಲಿಲ್ಲ. ರಹಸ್ಯ ಅರ್ಧಂಬರ್ಧವಾಗಿತ್ತು. ತನ್ನ ಸ್ನೇಹಿತ ಸುರೇಶ್‌ಗೆ ತೋರಿಸಿದಾಗ, ಅವನು ಹೇಳಿದ, ಈ ಮನೆಯಲ್ಲಿ ಒಂದು ಕೊಲೆ ನಡೆದಿತ್ತು. ಈ ಡೈರಿಯಲ್ಲಿ ಹೇಳಿದ್ದೇ ಆಗಿರಬಹುದು.

ಆ ರಾತ್ರಿಯಿಂದ, ಮನೆಯಲ್ಲಿ ವಿಚಿತ್ರ ಘಟನೆಗಳು ಆರಂಭವಾದವು. ಮೆಟ್ಟಿಲುಗಳಲ್ಲಿ ಕಾಲಿನ ಸಪ್ಪಳ, ದೀಪಗಳು ತಾವಾಗಿಯೇ ಆರಿಹೋಗುವುದು, ಕನಸಿನಲ್ಲಿ ಒಬ್ಬ ವ್ಯಕ್ತಿಯ ಧ್ವನಿ: ನನ್ನ ರಹಸ್ಯವನ್ನು ಕಂಡುಹಿಡಿ! ರಾಜೇಂದ್ರ ಭಯಗೊಂಡರೂ, ಕುತೂಹಲದಿಂದ ತನಿಖೆ ಆರಂಭಿಸಿದ. ಸುರೇಶ್‌ನೊಂದಿಗೆ ಹಳೆಯ ದಾಖಲೆಗಳನ್ನು ತಡಕಾಡಿದ.

ಕೊಲೆಯಾದವನು ಆ ಮನೆಯ ಹಿಂದಿನ ಮಾಲೀಕ, ಆದರೆ ಕೊಲೆಗಾರನ ಹೆಸರು ಗುಪ್ತವಾಗಿತ್ತು. ರಾಜೇಂದ್ರ ಡೈರಿಯನ್ನು ಸುರಕ್ಷಿತವಾಗಿಡಲು ಲಾಕರ್ ಒಳಗೆ ಹಾಕಿದ. ಆದರೆ ಒಂದು ರಾತ್ರಿ, ಸುರೇಶ್ ಹೇಳಿದ, ನೀನು ಆ ಡೈರಿಯನ್ನು ಓದಿದ್ದರಿಂದ, ಆ ಆತ್ಮವು ನಿನ್ನನ್ನು ಬಿಡದು. ಲಾಕ್ ಮಾಡಿದ ಬಾಗಿಲಿನಿಂದ ಧ್ವನಿಯೊಂದು ಕೇಳಿತು: ನಾನು ನಿನ್ನ ಆತ್ಮೀಯನಂತೆ ಕಾಣುತ್ತೇನೆ, ಆದರೆ ನಾನಲ್ಲ.

ಅಂತಿಮವಾಗಿ ಒಂದು ದಿನ ಪೊಲೀಸರು ತನಿಖೆಗೆ ಬಂದಾಗ, ಅಂಟಿಕೊಂಡಂತಿದ್ದ ಡೈರಿಯ ಕೊನೆಯ ಪುಟಗಳು ತೆರೆದುಕೊಂಡವು. ಅದರಲ್ಲಿ: ಕೊಲೆಗಾರನು ನನ್ನ ಸಹೋದರ. ರಾಜೇಂದ್ರ ಆಘಾತದಿಂದ ಸುರೇಶ್‌ನತ್ತ ನೋಡಿದ ಅವನ ಮುಖವು ಆತನ ಸಹೋದರನಂತೆ ಕಾಣುತ್ತಿತ್ತು! ಆ ಕ್ಷಣದಲ್ಲಿ, ಒಂದು ಶಕ್ತಿಯು ಸುರೇಶ್‌ನನ್ನು ಎಳೆದೊಯ್ದಂತಾಯಿತು. ರಾಜೇಂದ್ರ, ಆ ಮನೆಯನ್ನು ತೊರೆದು ಹೋದವನು ಮತ್ತೆ ಎಂದಿಗೂ ಹಿಂತಿರುಗಲಿಲ್ಲ!



**– ರಾಜಾಮಣಿ**


# ಕೋಶಭಿತ್ತಿಯ ರಚನೆ

ಕೋಶ ಪೊರೆಯ ಬಗ್ಗೆ ಮಾತನಾಡುತ್ತಾ ಆ ವಿಷಯವನ್ನು ಮರೆತು ಬಿಟ್ಟು ಬೇರೆ ವಿಷಯಗಳ ಬಗ್ಗೆ ಮಾತನಾಡುತ್ತಿದ್ದಾನಲ್ಲಾ ಎಂದು ಅನೇಕ ಬಾರಿ ಅಂದುಕೊಂಡಿರಬೇಕು ನೀವು. ಅದು ಹಾಗಲ್ಲ. ಒಂದು ವಿಷಯದ ಬಗ್ಗೆ ಅಮೂಲಾಗ್ರವಾಗಿ ತಿಳಿಯಬೇಕಲ್ಲವೇ? ಈಗ ಈ ಪೊರೆ ಎಲ್ಲಿ ಇದೆ ಎಂಬುದನ್ನು ತಿಳಿದೆವು. ಇದು ಕೋಶದ ಹೊರ ಭಾಗದಲ್ಲಿದ್ದು ಎರಡು ಕೋಶಗಳನ್ನು ಬೇರ್ಪಡಿಸುವ ಕೆಲಸ ಮಾಡುತ್ತವೆ. ಕೋಶದ ಒಳಗಡೆ ಪ್ರತಿ ಅಂಗಕಣಗಳ ಸುತ್ತಲೂ ಇದ್ದು ಅವುಗಳನ್ನು ಕೋಶ ರಸದಿಂದ ಬೇರ್ಪಡಿಸುತ್ತವೆ ಮತ್ತು ಹೊಸದಾಗಿ ರೂಪುಗೊಳ್ಳುವ ಲೈಸೋಸೋಮ್ ಮತ್ತು ಫ್ಯಾಗೋಸೋಮುಗಳು ಪ್ರತ್ಯೇಕವಾಗಿರುವಂತೆ ನೋಡಿಕೊಳ್ಳುತ್ತವೆ. ಅಂದರೆ ಕೋಶದೊಳಗೆ ಉಂಟಾಗುವ ಪ್ರತಿಯೊಂದು ಹೊಸಹುಟ್ಟೂ ನಗ್ನವಾಗಿರುವುದಿಲ್ಲ. ಬದಲಾಗಿ ಆವೃತ್ತವಾಗಿರುತ್ತದೆ.

ಇದು ಪ್ರಕೃತಿಯ ನಿಯಮ. ಯಾಕೆ ಎಂದು ನೀವು ಕೇಳಬಹುದು. ಗಾಲ್ಗಿ ಸಂಕೀರ್ಣಗಳು ಒಂದು ಕಿಣ್ವವನ್ನು ಉತ್ಪತ್ತಿ ಮಾಡುತ್ತದೆ ಎಂದಿಟ್ಟುಕೊಳ್ಳೋಣ. ಅದನ್ನು ಅದರೊಳಗೆ ಇರಿಸಿಕೊಳ್ಳಲಾಗದು. ಅದು ಯಾವ ಸ್ಥಳದಲ್ಲಿ ಕೆಲಸ ಮಾಡಬೇಕಾಗಿದೆಯೋ ಅಲ್ಲಿಗೆ ಸಾಗಿಸಬೇಕು. ಸಾಗಿಸಬೇಕಾದರೆ ಅದನ್ನು ಪ್ಯಾಕಿಂಗ್ ಮಾಡಬೇಕು ತಾನೇ. ಪ್ಯಾಕಿಂಗ್ ಮಾಡದೇ ನೇರವಾಗಿ ಕೋಶರಸಕ್ಕೆ ಸೇರಿಸಿ ಬಿಟ್ಟರೆ ಅದು ಅಲ್ಲಿಯೇ ತನ್ನ ಕೆಲಸವನ್ನು ಆರಂಭಿಸಿ ಬಿಟ್ಟರೆ ಇಡೀ ಕೋಶವೇ ಜೀರ್ಣಿಸಲ್ಪಡುತ್ತದೆ. ಕಪ್ಪೆಯ ಮರಿ ತನ್ನ ಬಾಲವನ್ನು ಕಳೆದುಕೊಳ್ಳುವುದು ಇದೇ ರೀತಿಯಾಗಿ. ಆದ್ದರಿಂದ ಕೋಶ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ಅದು ಆವರಿಸಲ್ಪಡಲೇಬೇಕು.

ಈ ಪೊರೆ ಜೀವಂತವೇ, ಮೃತವೇ, ಅಪಾರದರ್ಶಕವೇ, ಪಾರದರ್ಶಕವೇ ಅಥವಾ ಇನ್ನೇನು ನೋಡೋಣ. ಸಸ್ಯಗಳಲ್ಲಿ ಕೋಶಪೊರೆಯ ಹೊರಭಾಗದಲ್ಲಿ ಇನ್ನೊಂದು ಪೊರೆ ಇದೆ. ಇದು ಜೀವ ರಹಿತವಾದ್ದರಿಂದ ಇದನ್ನು ಭಿತ್ತಿ (ಗೋಡೆ) ಎಂದು ಪರಿಗಣಿಸಲಾಗುತ್ತದೆ. ಇದು ಕೋಶಭಿತ್ತಿ (cell wall). ಕೋಶ ಭಿತ್ತಿ ಸಾಮಾನ್ಯವಾಗಿ ಸೆಲ್ಯುಲೋಸ್, ಪೆಕ್ಟಿನ್ ಅಥವಾ ಲಿಗ್ನಿನ್ ನಿಂದ ಮಾಡಲ್ಪಟ್ಟಿರುತ್ತದೆ. ಈ ಸೆಲ್ಯುಲೋಸ್ ನೈಸರ್ಗಿಕವಾಗಿ ಕಂಡುಬರುವ ಸಮೃದ್ಧ ಪಾಲಿಮರ್. ಇದು ಸಸ್ಯಗಳ ಕೋಶಗಳಿಗೆ ಆಧಾರ ಮತ್ತು ದೃಢತೆಯನ್ನು ಒದಗಿಸಬಲ್ಲುದು. ಈ ಸೆಲ್ಯುಲೋಸ್‌ನಿಂದಲೇ ಬಟ್ಟೆ, ಕಾಗದ ಮತ್ತು ಸಾವಯವ ಇಂಧನಗನ್ನು ಪಡೆಯುತ್ತೇವೆ. ಇದೊಂದು ಬಹು ಅಣುಗಳನ್ನು ಹೊಂದಿರುವ ಉದ್ದ ಸರಪಣಿಯ ಶರ್ಕರ ಪಿಷ್ಟ. ಇದನ್ನು ಸಸ್ತನಿಗಳು ಜೀರ್ಣಿಸಲಾರವು. ಆದ್ದರಿಂದ ಸೆಲ್ಯುಲೋಸ್ ಅನ್ನು ಆಹಾರದ ನಾರು (dietary fiber) ಎಂದು ಪರಿಗಣಿಸಲಾಗುತ್ತದೆ. ಹಾಗಾದರೆ ಹಾಕುತ್ತವೆಯೇ ಎಂದರೆ ಇಲ್ಲ. ಈ ಪ್ರಾಣಿಗಳಿಗೆ ಉದ್ದವಾದ ಕರುಳು ಇರುತ್ತದೆ. ಈ ಕರುಳಿನಲ್ಲಿ ಆಶ್ರಯ ಪಡೆಯುವ cellulolytic bacteria ಗಳು ಈ ಸೆಲ್ಯುಲೋಸ್ ಅನ್ನು ಜೀರ್ಣಿಸುತ್ತವೆ. ಇದೇ ಬ್ಯಾಕ್ಟೀರಿಯಾಗಳು ಗೆದ್ದಲುಗಳ ಕರುಳಿನಲ್ಲಿಯೂ ಇರುವುದರಿಂದ ಗೆದ್ದಲುಗಳು ಕಾಗದ ಕಟ್ಟಿಗೆಯನ್ನು ತಿಂದು ಮುಗಿಸುತ್ತವೆ. ಕೋಶ ಭಿತ್ತಿಯ ಇನ್ನೊಂದು ವಸ್ತುವಾದ ಲಿಗ್ನಿನ್ ಕೂಡಾ ಒಂದು ಶರ್ಕರ ಪಿಷ್ಟಕ್ಕಿಂತ ಭಿನ್ನವಾದ ಒಂದು ಪಾಲಿಮರ್. ಇದು ತೊಗಟೆ ರಾಳ ಮತ್ತು ಕಟ್ಟಿಗೆಯಲ್ಲಿ ಕೂಡಾ ಕಂಡುಬರುತ್ತದೆ. ಇದನ್ನು ಜೀರ್ಣಿಸುವ ಸಾಮರ್ಥ್ಯ ಮಿತವಾದದ್ದು. ಕೆಲ ಸೂಕ್ಷ್ಮಾಣು ಅಣಬೆಗಳು ಮತ್ತು ಬ್ಯಾಕ್ಟೀರಿಯಾಗಳು ಮಾತ್ರ ಲಿಗ್ನಿನ್ ಅನ್ನು ಜೀರ್ಣಿಸಬಲ್ಲವು. ಆದ್ದರಿಂದ ಲಿಗ್ನಿನ್ ಸಮೃದ್ಧವಾಗಿರುವ ಮರಗಳಾದ ತೆಂಗು, ತಾಳೆ, ಬೈನೆ ಮರದ ಮೋಪನ್ನು ಗೆದ್ದಲು ತಿನ್ನಲಾರದು. ಪೆಕ್ಟಿನ್ ಇದು ನೀರಿನಲ್ಲಿ ಕರಗುವ ಒಂದು ಪಾಲಿಮರ್. ಇದು ತರಕಾರಿ, ಕಿತ್ತಳೆ, ಸೇಬುವಿನಂತಹ ಹಣ್ಣುಗಳಲ್ಲಿ ಕಂಡುಬರುತ್ತವೆ.

**– ದಿವಾಕರ ಶೆಟ್ಟಿ ಎಚ್,** ಮಂಗಳೂರು



# ಹಿಂದೂ ಎನ್ನದ ಮಠಾಧೀಶರು ಖಾವಿ ಬಟ್ಟೆ ತ್ಯಜಿಸಲಿ

## ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟಗಾರರಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿರುಗೇಟು

• ಪ್ರಜೋದಯ ವರದಿ

**ಹುಬ್ಬಳ್ಳಿ:** ಹಿಂದೂ ಧರ್ಮವನ್ನು ಅಪಮಾನ ಮಾಡಬೇಕೆನ್ನುವುದೇ ಕೆಲವು ಮಠಾಧೀಶರ ಉದ್ದೇಶವಾಗಿದೆ. ಅದಕ್ಕಾಗಿ ಅವರು ಲಿಂಗಾಯತವೀರಶೈವ ಪ್ರತ್ಯೇಕ ಧರ್ಮ ಎನ್ನುತ್ತಿದ್ದಾರೆಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಲಿಂಗಾಯತ ಮತ್ತು ವೀರಶೈವ ಇಬ್ಬರ ಸಂಪ್ರದಾಯವೂ ಒಂದೆಯಾಗಿದ್ದು, ಹಿಂದೂ ಧರ್ಮದ ಭಾಗವಾಗಿದ್ದಾರೆ. ಕೆಲವು ಕಮ್ಯೂನಿಸ್ಟ್ ಮನಸ್ಥಿತಿ ಸ್ವಾಮೀಜಿಗಳು ಉದ್ದೇಶ ಪೂರ್ವಕವಾಗಿ ತಮ್ಮ ವೈಭವೀಕರಣಕ್ಕಾಗಿ, ಸ್ವಾರ್ಥಕ್ಕಾಗಿ ಪ್ರತ್ಯೇಕ ಧರ್ಮ ಎನ್ನುತ್ತಿದ್ದಾರೆ. ಹಿಂದೂ ಶಬ್ಧಕ್ಕೆ ಅಪಮಾನ ಮಾಡಬೇಕೆನ್ನುವ ವ್ಯವಸ್ಥಿತ ಸಂಚು ರಾಜ್ಯದಲ್ಲಿ ನಡೆಯುತ್ತಿದೆಯೆಂದು ತಿಳಿಸಿದರು.



ಹಿಂದೂ ಧಾರ್ಮಿಕ ಸಂಪ್ರದಾಯದಲ್ಲಿನ ಹೋಮ ಹವನಕ್ಕೆ ಅಪಮಾನ ಮಾಡುವುದು ಸ್ವಾಮೀಜಿಗಳ ಉದ್ದೇಶ. ಹಿಂದೂ ಧರ್ಮ ಬೇಡ ಎನ್ನುವ ಸ್ವಾಮೀಜಿಗಳು ಕೇಸರಿ ಬಟ್ಟೆ ತ್ಯಾಗ ಮಾಡಿ, ಹಸಿರು, ಬಿಳಿ ಬಟ್ಟೆ ಧರಿಸಲಿ. ಅಂಥ ಸ್ವಾಮೀಜಿ ನಮಗೆ ಬೇಕಾಗಿಲ್ಲ. ಬಿಜೆಪಿಯಿಂದ ಹಿಂದೂ ಧರ್ಮದ ಹೆಸರು ಹೇಳಿ ಜನಪ್ರತಿನಿಧಿಯಾಗಿ ಆಯ್ಕೆಯಾದವರು ಪಕ್ಷ ಬಿಟ್ಟು ಹೋಗಲಿ ಎಂದು ಕಿಡಿಕಾರಿದರು.

ಹಿಂದೂ ಧರ್ಮವನ್ನು ಹೀಯಾಳಿಸುವ ಏಕತಾ ಸಮಾವೇಶಕ್ಕೆ ನಾನು ಹೋಗುವುದಿಲ್ಲ. ಹಿಂದೂ ಧರ್ಮ ಬೇಡ ಎನ್ನುವವರು ದೇಶವೇ ಬೇಡ ಎಂದ ಹಾಗೆ ಎಂದು ಅಭಿಪ್ರಾಯಪಟ್ಟರು.



ಲಿಂಗಾಯತ ವೀರಶೈವ ಅಧಿಕೃತ ಧರ್ಮವಲ್ಲ, ಅದಕ್ಕೆ ಕೇಂದ್ರ ಸರ್ಕಾರದಿಂದ ಮಾನ್ಯತೆಯೂ ಸಿಕ್ಕಿಲ್ಲ. ಹೀಗಾಗಿ ಲಿಂಗಾಯತ ಸಮುದಾಯದವರು ಜಾತಿ ಸಮೀಕ್ಷೆ ಸಂದರ್ಭದಲ್ಲಿ ಧರ್ಮ ಕಾಲಂನಲ್ಲಿ ಹಿಂದೂ, ಜಾತಿ ಕಾಲಂನಲ್ಲಿ ಲಿಂಗಾಯತ ಅಥವಾ ವೀರಶೈವ ಎಂದು ಬರೆಸಬೇಕು ಎಂದು ವಿನಂತಿಸಿದರು.

ಬಸವರಾಜ ಬೊಮ್ಮಾಯಿ ಅವರು ಜಾತಿ ಸಮೀಕ್ಷೆಯಲ್ಲಿ ಧರ್ಮದ ಕಾಲಂನಲ್ಲಿ ಹಿಂದೂ ಬರೆಸುವಂತೆ ಹೇಳಿದ್ದು ಸ್ವಾಗತಾರ್ಹ. ಆದರೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಅದು ಮಠಾಧೀಶರಿಗೆ ಬಿಟ್ಟಿದ್ದೆಂದು ಹೇಳಿಕೆ ನೀಡಿದ್ದಾರೆ. ಪಕ್ಷದ ಮೂಲ ಸಿದ್ಧಾಂತವೇ ಹಿಂದುತ್ವವಾಗಿದೆ. ಹಿಂದೂ ಎಂದುಕೊಳ್ಳುವವರು ಬಿಜೆಪಿಯಲ್ಲಿರಲಿ, ವಿರೋಧಿಸುವವರು ಬೇರೆ ಪಕ್ಷ ಸೇರಿಕೊಳ್ಳಲಿ ಎಂದರು.

### ಮಹಾಸಭಾದಿಂದ ಹೊರಗೆ ಬರಲಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾವು ಬಿ.ಎಸ್.ಯಡಿಯೂರಪ್ಪ, ಶಾಮನೂರು ಶಿವಶಂಕರಪ್ಪ ಹಾಗು ಈಶ್ವರ ಖಂಡ್ರೆ ಅವರ ಕುಟುಂಬದ ಕೈಲಿ ಸಿಲುಕಿ ನಲುಗುತ್ತಿದೆ. ಬೆಳಗಾವಿಯಲ್ಲಿ ಪಂಚಮಸಾಲಿ ಸಮುದಾಯದವರು ಪ್ರತಿಭಟನೆ ನಡೆಸಿದಾಗ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅವರ ಮೇಲೆ ಲಾಠಿ ಚಾರ್ಜ್ ನಡೆಸಿತು. ಆ ಸಂದರ್ಭ ಮಹಾಸಭಾ ನಾಯಕರು ಮೌನ ವಹಿಸಿದ್ದು ಯಾಕೆ. ಸಮಾಜದ ಮೇಲೆ ಕಳಕಳಿಯಿದ್ದರೆ ಈ ಮೂರು ಮಂದಿ ಹೊರಗೆ ಬಂದು, ಮಹಾಸಭಾವನ್ನು ವಿಸರ್ಜಿಸಬೇಕು. ಕುಟುಂಬದ ಸ್ವಾರ್ಥ ರಾಜಕಾರಣಕ್ಕೆ ಮಹಾಸಭಾವನ್ನು ಬಳಸಿಕೊಳ್ಳುತ್ತಿದ್ದಾರೆಂದು ಶಾಸಕ ಯತ್ನಾಳ್ ಆರೋಪಿಸಿದರು. ಏಕತಾ ಸಮಾವೇಶದಲ್ಲಿ ಪಾಲ್ಗೊಳ್ಳುವ ಬಿಜೆಪಿ ಮುಖಂಡರಿಗೆ ಹೈಕಮಾಂಡ್ ನೋಟಿಸ್ ನೀಡಬೇಕು. ಹಿಂದೂ ಎಂದು ಕರೆಸಿಕೊಳ್ಳಲು ನಾಚಿಕೆ ಪಡುವ ಮುಖಂಡರು ಶಾಮನೂರು ಶಿವಶಂಕರಪ್ಪ, ಯಡಿಯೂರಪ್ಪ ಅವರ ಮನೆಯಲ್ಲಿ ಕುಳಿತುಕೊಳ್ಳಲಿ ಎಂದು ಟೀಕಿಸಿದರು.

# ಆಲೂರಿನಲ್ಲಿ ಅದ್ದೂರಿ ಗಣೇಶ ವಿಸರ್ಜನೆ

• ಪ್ರಜೋದಯ ವರದಿ

**ಆಲೂರು:** ಪಟ್ಟಣದ ಕೆಇಬಿ ವೃತ್ತದಲ್ಲಿ ವಿನಾಯಕ ಯುವಕರ ಬಳಗದ ವತಿಯಿಂದ ಪ್ರತಿಷ್ಠಾಪಿಸಲಾಗಿದ್ದ ಮೂರನೇ ವರ್ಷದ ಗೌರಿ- ಗಣೇಶ ಮೂರ್ತಿಗಳ ಮೆರವಣಿಗೆ ಅದ್ದೂರಿಯಾಗಿ ನಡೆಯಿತು.

ಗಣೇಶ ಚತುರ್ಥಿಯಂದು ಪ್ರತಿಷ್ಠಾಪಿಸಲಾಗಿದ್ದ ಗೌರಿ- ಗಣೇಶ ಮೂರ್ತಿಗೆ ಅಂದಿನಿಂದ ವಿಶೇಷ ಪೂಜೆ, ವಿವಿಧ ದಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿಸರ್ಜನಾ ಮಹೋತ್ಸವದ ಅಂಗವಾಗಿ ಗೌರಿ, ಗಣಪತಿಗೆ ಬೆಳಿಗ್ಗೆ ಪೆಂಡಾಲಿನಲ್ಲಿ ಹೋಮ ಸೇರಿದಂತೆ ಪೂಜಾ ವಿಧಿವಿಧಾನಗಳು ಜರುಗಿದವು. ಮಹಾ ಮಂಗಳಾರತಿ ನಂತರ ನೆರೆದಿದ್ದ ಭಕ್ತರಿಗೆ ಅನ್ನದಾನ ನೆರವೇರಿಸಲಾಯಿತು.

ರಸ್ತೆಗಳ ಅಕ್ಕಪಕ್ಕದಲ್ಲಿ ಬಂಟಿಂಗ್ಸ್ ಹಾಕಿ ಅಲಂಕರಿಸಲಾಗಿತ್ತು, ಬಣ್ಣ ಬಣ್ಣದ ಹೂವುಗಳು, ಹಾರಗಳಿಂದ ಅಲಂಕೃತಗೊಂಡಿದ್ದ ಗೌರಿ, ಗಣಪತಿ ಮೂರ್ತಿಗಳಿಗೆ ವಿಶೇಷ ಪೂಜೆ ಸಲ್ಲಿಸಿ ಬೆಳ್ಳಿರಥ ಅಲಂಕೃತಗೊಂಡ ಟ್ರಾಕ್ಟರ್‌ನಲ್ಲಿ ಮೆರವಣಿಗೆ ಮಾಡಲಾಯಿತು.



ಮೆರವಣಿಗೆಯಲ್ಲಿ ಶ್ರೀರಾಮ, ಆಂಜನೇಯನ ಬೃಹತ್ ವಿಗ್ರಹಗಳ ಮೆರವಣಿಗೆ ಆಕರ್ಷಣೀಯವಾಗಿತ್ತು. ನಾಸಿಕ್ ಡೋಲು, ನಂದಿಧ್ವಜ, ವೀರಗಾಸೆ, ಮಂಗಳ ವಾದ್ಯ ನಾದಸ್ವರ, ಬೆಳ್ಳಿರಥ, ವಿಶೇಷ ತಮಟೆ ವಾದ್ಯ, ಡಿ.ಜೆ. ಹಾಗೂ ಪಟಾಕಿ ಸಿಡಿತ ಎಲ್ಲರ ಮನಸೂರೆ ಗೊಂಡಿತು.

ಮೆರವಣಿಗೆಯಲ್ಲಿ ಸಾವಿರಾರು ಯುವಕ, ಯುವತಿಯರು ಕೇಸರಿ ಶಾಲು ಹಾಕಿಕೊಂಡು ಯುವತಿಯರು ಬಾರಿಸುತ್ತಿದ್ದ ತಮಟೆ ತಾಳಕ್ಕೆ ತಕ್ಕಂತೆ ಕುಣಿದು ಕುಪ್ಪಳಿಸಿದರು. ರಾತ್ರಿ 10.30 ಕ್ಕೆ ಸರಿಯಾಗಿ ಹಳೆ ಕೋರ್ಟ್ ಸರ್ಕಲ್ ಬಳಿ ಇರುವ ಕಲ್ಯಾಣಿಯಲ್ಲಿ ಗೌರಿ, ಗಣಪತಿ ಮೂರ್ತಿಗಳನ್ನು ಭಕ್ತಿಯಿಂದ ವಿಸರ್ಜಿಸಲಾಯಿತು. ಮುಂಜಾಗ್ರತಾ ಕ್ರಮವಾಗಿ ಭಾರಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ದಸರಾ ಉತ್ಸವಕ್ಕೆ ಅನುದಾನ: ಮನವಿ



**ಅರಕಲಗೂಡು ದಸರಾ ಮಹೋತ್ಸವಕ್ಕೆ ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅವರನ್ನು ವಿಧಾನಸೌಧದ ಸಚಿವರ ಕಚೇರಿಯಲ್ಲಿ ಶಾಸಕ ಎ.ಮಂಜು ಅವರು ಭೇಟಿಯಾಗಿ ಮನವಿ ಸಲ್ಲಿಸಿದರು.**

# ಶಿಲಾಮಯ ಬನ್ನಿಮಂಟಪ ಲೋಕಾರ್ಪಣೆ

ಹಾರನಹಳ್ಳಿ: ಇಲ್ಲಿಗೆ ಸಮೀಪ ಕಸಬಾ ಹೋಬಳಿಯ ತಳಲೂರು ಗ್ರಾಮದಲ್ಲಿ ಗ್ರಾಮ ದೇವತೆ ಶ್ರೀ ಬನ್ನಿ ಮಹಾಕಾಳಿ ಅಮ್ಮನವರ ದೇವಾಲಯದ ಪ್ರಕಾರದಲ್ಲಿ ನೂತನವಾಗಿ ನಿರ್ಮಿಸಿರುವ ಶಿಲಾಮಯ ಬನ್ನಿ ಮಂಟಪದ ಲೋಕಾರ್ಪಣ ಕಾರ್ಯಕ್ರಮ ಶುಕ್ರವಾರ ನೂರಾರು ಭಕ್ತರ ಸಮ್ಮುಖದಲ್ಲಿ ವೈಭವದಿಂದ ನಡೆಯಿತು.

ವಿವಿಧ ಧಾರ್ಮಿಕ ಪೂಜೆ ಕಲಾಹೋಮ.ದುರ್ಗಾ ಹೋಮ ವಾಸ್ತು ಹೋಮ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಸುವಾಸಿನಿಯರುಗಳಿಂದ ಗ್ರಾಮ ಪುರಾತನ ಬಾವಿಯಲ್ಲಿ ಗಂಗೆ ಪೂಜೆ ಮಾಡಿದ ನಂತರ ಗ್ರಾಮದೇವತೆ ಬನ್ನಿಮಹಾಕಾಳಿ, ಧೂತರಾಯ ಸ್ವಾಮಿ, ಜಂಬುಲಿಂಗಶ್ವರ ಸ್ವಾಮಿ, ದೇವಮ್ಮ ದೇವರು ಇತರ ದೇವರುಗಳನ್ನು ಉತ್ಸವದಲ್ಲಿ ಕರೆತಂದರು. ಉತ್ಸವದಲ್ಲಿ ಅರೆವಾಧ್ಯ ಉತ್ಸವಕ್ಕೆ ಮೆರಗು ನೀಡಿತು.



ಗ್ರಾಮದೇವತೆಗಳು ಬನ್ನಿ ಮಂಟಪ ಪ್ರದಕ್ಷಿಣೆ ಮಾಡಿದ ನಂತರ ಬನ್ನಿ ಮಂಟಪದ ಮೇಲೆ ನೂತನವಾಗಿ ನಿರ್ಮಿಸಿದ ಮಂಟಪದಲ್ಲಿ ಅಮ್ಮನವರನ್ನು ಪ್ರತಿಷ್ಠಾಪನೆ ಮಾಡಿದ ನಂತರ ಕುಂಭಾಭಿಷೇಕ ಸೇವೆಯನ್ನು ಬನ್ನಿ ಮಂಟಪದ ನಿರ್ಮಾಣದ ಸೇವಾರ್ಥದಾರ ಜಗದೀಶ್ ಮಾಡಿದರು. ಕಲಾಹೋಮದ ಮಹಾ ಪೂರ್ಣಾಹುತಿ ನಡೆಯಿತು.

ಗ್ರಾಮ ದೇವರುಗಳನ್ನು ಮಂಟಪದಲ್ಲಿ ಕೂರಿಸಿ ಮಹಾ ಮಂಗಳಾರತಿ ನಡೆಯಿತ್ತು ಹಾಸನದ ವೇದ ವಿದ್ವಾನ್ ಎಂ.ವಿ.ಕೃಷ್ಣಮೂರ್ತಿ ಘನಪಾಠಿಗಳ ಆಚಾರ್ಯತ್ವದಲ್ಲಿ ವಿವಿಧ ಹವನ ಕಾರ್ಯಗಳು ನಡೆದವು. ನಂತರ ಶಾಸಕ ಕೆ.ಎಂ.ಶಿವಲಿಂಗೇಗೌಡ ಬನ್ನಿ ಮಂಟಪವನ್ನು ಉದ್ಘಾಟಿಸಿದರು.

ಈ ಸಂಧರ್ಭದಲ್ಲಿ ತಳಲೂರು ಗ್ರಾಮ ಮುಖಂಡರು ಭಕ್ತಾಧಿಗಳು, ಸುತ್ತಮುತ್ತಲಿನ ಗ್ರಾಮಸ್ಥರುಗಳು ಉಪಸ್ಥಿತರಿದ್ದರು. ಭಕ್ತರುಗಳಿಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು. ಮೂಲ ಸ್ಥಾನದ ಬನ್ನಿಮಹಾಕಾಳಿ ಅಮ್ಮನವರಿಗೆ ಬಣ್ಣ ಬಣ್ಣದ ಹೂವುಗಳಿಂದ ಅಲಂಕರಿಸಿದ್ದರು.




**ಹಾಸನ: ನಗರದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಾನವ ಸಂಪನ್ಮೂಲ ನಿರ್ವಹಣೆ ಕುರಿತ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಭಾರ ಪ್ರಾಂಶುಪಾಲ ರಾಜಶೇಖರ್ ಮಾತನಾಡಿ, ಭಾರತದ ಆರ್ಥಿಕ ವ್ಯವಸ್ಥೆಯ ಬದಲಾವಣೆಯಲ್ಲಿ ವಿದ್ಯಾರ್ಥಿಗಳ ಪಾತ್ರವೇನು ಎಂದು ತಿಳಿಸಿದರು.**

**ಅರ್ಥಶಾಸ್ತ್ರ ವಿಭಾಗದ ಸಹಪ್ರಾಧ್ಯಾಪಕ ಗಿರೀಶ್ ಅವರು ಮಾನವ ಸಂಪನ್ಮೂಲ ನಿರ್ವಹಣೆಯ ಬಗ್ಗೆ ಸಂಪೂರ್ಣವಾಗಿ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ.ರೂಪ, ಪದ್ಮಾವತಿ, ಲತಾ ಹಾಗೂ ಡಾ.ರತ್ನ ಅವರು ಉಪಸ್ಥಿತರಿದ್ದರು.**

# ಇಂದು ಜನಸ್ಪಂದನ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕ ಕುಂದು ಕೊರತೆ ಅಹವಾಲನ್ನು ದಾಖಲಿಸಲು ಸರ್ಕಾರವು ಏಕೀಕೃತ ಸಾರ್ವಜನಿಕ ದೂರು ನಿವಾರಣಾ ತಂತ್ರಾಂಶ (Integrated Public Grievance Redressal System) ಎಂಬ ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗಿರುತ್ತದೆ. ಅದರಂತೆ ಹಾಸನ ಜಿಲ್ಲಾ ಜನಸ್ಪಂದನಾ, ಸಾರ್ವಜನಿಕ ಕುಂದು ಕೊರತೆ ಸಭೆಯನ್ನು ಜಿಲ್ಲಾ ಮಟ್ಟದಲ್ಲಿ ಸೆ.20 ರಂದು ಬೆಳಿಗ್ಗೆ 10ಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿರುತ್ತದೆ. ಅದರಂತೆ ಸದರಿ ದಿನದಂದು ಸಾರ್ವಜನಿಕರು ಖುದ್ದು ಹಾಜರಾಗಿ ಮನವಿಗಳನ್ನು ನೀಡಲು ತೆರೆಯಲಾದ ಕೌಂಟರ್‌ಗಳಲ್ಲಿ ಅರ್ಜಿ ದಾಖಲಿಸಿ ಕೊಂಡು ಟೋಕನ್ ನಂಬರ್ ಸ್ವೀಕರಿಸಿ ತಮ್ಮ ಅಹವಾಲನ್ನು ಸಲ್ಲಿಸಲು ತಿಳಿಸಿದೆ.

# ಗಾಂಜಾ ಸಾಗಿಸುತ್ತಿದ್ದ ಇಬ್ಬರ ಬಂಧನ



**ಸಕಲೇಶಪುರ:** ತಾಲ್ಲೂಕಿನ ಹಾಲೇ ಬೇಲೂರು ಗ್ರಾಮದ ಗಣಪತಿ ದೇವಸ್ಥಾನ ಸಮೀಪ ಗಾಂಜಾ ಸಾಗಣೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಅಬಕಾರಿ ಇಲಾಖೆ ಅಧಿಕಾರಿಗಳು ದಾಳಿ ನಡೆಸಿ ಬಂಧಿಸಿ, ಗಾಂಜಾ ವಶಪಡಿಸಿಕೊಂಡಿದ್ದಾರೆ. ಅಮೀರ್ ಜಾನ್, ಎಂ.ಎಸ್.ಪ್ರಕಾಶ್ ಬಂಧಿತ ಆರೋಪಿಗಳು.

ಅಪೇ ಪ್ಯಾಸೆಂಜರ್ ಆಟೋದಲ್ಲಿ ಇಬ್ಬರು ಯುವಕರು ಗಾಂಜಾ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ಬಂದ ಹಿನ್ನಲೆ ಅಬಕಾರಿ ನಿರೀಕ್ಷಕ ಹೆಚ್.ಕೆ.ವೆಂಕಟೇಶ್ ಅವರ ನೇತೃತ್ವದಲ್ಲಿ ನಡೆದ ದಾಳಿ ನಡೆಸಿ, 224 ಗ್ರಾಂ. ಒಣ ಗಾಂಜಾ ಸೊಪ್ಪು ಹಾಗು ಆಟೋ ವಶಪಡಿಸಿಕೊಂಡು ಆರೋಪಿಗಳನ್ನು ಬಂಧಿಸಿ, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವಿಸಿರುವುದು ದೃಢಪಟ್ಟಿದೆ. ಈ ಹಿನ್ನಲೆ ಆರೋಪಿಗಳ ಮೇಲೆ ಎನ್.ಡಿ.ಪಿ.ಎಸ್. ಕಾಯ್ದೆ-1985 ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

**ಹಾಸನ:** ಸಮಾಜ ಕಲ್ಯಾಣ ಇಲಾಖೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ವತಿಯಿಂದ 2025-26 ನೇ ಸಾಲಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಮೆಟ್ರಿಕ್ ಪೂರ್ವ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಡಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಂತೆ ಮಾಡಲು ಹಾಗೂ ಅರ್ಹ ವಿದ್ಯಾರ್ಥಿಯು ವಿದ್ಯಾರ್ಥಿ ವೇತನದಿಂದ ವಂಚಿತರಾಗದಂತೆ ಮಾಡುವ ಸಂಬಂಧ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೋರಿ ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ಮೂಲಕ ಅರ್ಜಿ ಆಹ್ವಾನಿಸಲಾಗಿರುತ್ತದೆ.

ಮಾಹಿತಿಗಾಗಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖಾ ಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ.

# ಸಮೀಕ್ಷೆಯ ಹೆಸರಲ್ಲಿ ಹೊಸ ಜಾತಿಗಳ ಸೃಷ್ಟಿಸಲು ಸಂಚು

## ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ

• ಪ್ರಜೋದಯ ವರದಿ

**ಬೆಂಗಳೂರು:** ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ಹೆಸರಿನಲ್ಲಿ 331 ಹೊಸ ಜಾತಿಗಳನ್ನು ಸೃಷ್ಟಿ ಮಾಡುವ ವ್ಯವಸ್ಥಿತ ಸಂಚು ನಡೆಯುತ್ತಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಆಪಾದಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ ಜಾತಿಗಳು ಅಸ್ತಿತ್ವದಲ್ಲಿ ಇಲ್ಲವೇ ಇಲ್ಲ. ಆದರೂ ಮುಂದಿನ ರಾಜಕೀಯ ಭವಿಷ್ಯಕ್ಕಾಗಿ ಹೊಸ ಜಾತಿಗಳನ್ನು ಸೃಷ್ಟಿಸಲಾಗುತ್ತಿದೆ ಎಂದು ಆರೋಪಿಸಿದರು.

ದನಿ ಇಲ್ಲದವರಿಗೆ ದನಿ ನೀಡಲು ಜಾತಿಗಣತಿ ಆಗಬೇಕೇ ಹೊರತು ರಾಜಕೀಯ ಭವಿಷ್ಯಕ್ಕಾಗಿ ಅಲ್ಲ ಎಂದು ಯಾರ ಹೆಸರನ್ನೂ ಹೇಳದೆ ಆರೋಪ ಮಾಡಿದರು. ಕೇಂದ್ರ ಸರ್ಕಾರವೇ ಜಾತಿ ಗಣತಿಯನ್ನು



ಮಾಡುತ್ತಿದೆ. ಆದರೂ ರಾಜ್ಯಸರ್ಕಾರ 420 ಕೋಟಿ ರೂ. ಖರ್ಚು ಮಾಡಿ ಸೆ.22 ರಿಂದ 15 ದಿನದಲ್ಲಿ 2 ಕೋಟಿ ಮನೆಗಳ ಸಮೀಕ್ಷೆ ನಡೆಸಲಿದೆಯಂತೆ. 10 ವರ್ಷಗಳಲ್ಲಿ ಸಾಧಿಸಲಾಗದ್ದನ್ನು 15 ದಿನಗಳಲ್ಲಿ ಮಾಡಲಾಗುತ್ತದೆಯೇ?, ಇದು ವಾಸ್ತವಿಕವಾಗಿ ಸಾಧ್ಯವಿದೆಯೇ?, ಈ ಸಮೀಕ್ಷೆಯಿಂದ ನಿಮಗೆ ಲಾಭ ಆಗಬಹುದು?, ಜನರಿಗೆ ಏನು ಲಾಭವಾಗುತ್ತದೆ ಎಂದು ವಾಗ್ದಾಳಿ ನಡೆಸಿದರು.

ಜನರ ತೆರಿಗೆ ಹಣವನ್ನು ಏಕೆ ವ್ಯಯ ಮಾಡಬೇಕು ಎಂದು ಪ್ರಶ್ನಿಸಿದ ಅವರು, 2015 ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿ ಕಾಂತರಾಜು ನೇಮಕಗೊಂಡು ಅವರ ಅವಧಿಯಲ್ಲಿ ಸಮೀಕ್ಷಾ ವರದಿ ಸಿದ್ಧಪಡಿಸಲಾಗಿತ್ತು. 2018 ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿಯವರು ಆಯೋಗದ ಸಹ ಕಾರ್ಯದರ್ಶಿಯವರ ಸಹಿ ಇಲ್ಲ ಎಂಬ ಕಾರಣಕ್ಕೆ ವರದಿಯನ್ನು ಸ್ವೀಕರಿಸಲಿಲ್ಲ. ಈ ವರದಿ ಸಿದ್ಧಪಡಿಸಲು 180 ಕೋಟಿ ರೂ. ಹಣವನ್ನು ವ್ಯಯ ಮಾಡಲಾಗಿತ್ತು. ಅಲ್ಲದೆ ಅದನ್ನು ವೈಜ್ಞಾನಿಕವಾಗಿ ಕೂಡ ಮಾಡಿರಲಿಲ್ಲ ಎಂದು ಆರೋಪಿಸಿದರು.

ಜಾತಿಗಣತಿಗೆ ಸಂಬಂಧಿಸಿದಂತೆ ಆಯಾ ಸಮುದಾಯದ ಮಠಾಧೀಶರು, ನಾಯಕರು ಚರ್ಚೆ ಮಾಡುತ್ತಿದ್ದಾರೆ. ಆದಿ ಚುಂಚನಗಿರಿ ಮಠಾಧೀಶರಾದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಯವರು ನಾಳೆ ಈ ಬಗ್ಗೆ ಸಭೆ ಕರೆದಿದ್ದು, ಮಾಜಿ ಪ್ರಧಾನಿ ಎಚ್.ದೇವೇಗೌಡರು, ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಸಮುದಾಯದ ನಾಯಕರಿಗೆ ಆಹ್ವಾನ ನೀಡಲಾಗಿದೆ. ಜಾತಿಗಣತಿ ವಿಚಾರದಲ್ಲಿ ರಾಜ್ಯ ಸರ್ಕಾರದ ನಡೆ ಆತಂಕಕ್ಕೆ ಎಡೆ ಮಾಡಿದೆ. ಸಂಶಯಾತಕ ನಡೆಗಳು ಕಂಡುಬರುತ್ತಿದ್ದು, ಈ ಬಗ್ಗೆ ಎಲ್ಲರೂ ಚರ್ಚಿಸಬೇಕಿದೆ ಎಂದರು.

# ಹೈನುಗಾರಿಕೆ ಪ್ರೋತ್ಸಾಹಿಸಲು ಶಾಸಕ ಬಾಲಕೃಷ್ಣ ಸಲಹೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಸಂಘದ ಲಾಭಾಂಶವನ್ನು ಹಾಲು ಉತ್ಪಾದಕ ಸದಸ್ಯರಿಗೆ ನೀಡುವ ಮೂಲಕ ಹೈನುಗಾರಿಕೆಯನ್ನುಪ್ರೋತ್ಸಾಹಿಸಬೇಕೆಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ವಾರ್ಷಿಕ ಸಭೆ ಮತ್ತು ಪಶು ಆಹಾರ ದಾಸ್ತಾನು ಕೊಠಡಿ ಉದ್ಘಾಟಿಸಿ ಮಾತನಾಡಿದ ಅವರು, ಸಂಘದ ಬೆಳವಣಿಗೆಯಲ್ಲಿ ಸದಸ್ಯರ ಹೆಚ್ಚು ಶ್ರಮ ಇರುತ್ತದೆ. ಗುಣಮಟ್ಟದ ಹಾಲನ್ನು ಸಂಘದ ಸದಸ್ಯರು ಸರಬರಾಜು ಮಾಡಿರುವುದರಿಂದ 2024-25ನೇ ಸಾಲಿ ನಲ್ಲಿ ಈ ಸಂಘವು 2,14,337 ನಿವ್ವಳ ಲಾಭ ಗಳಿಸಿದೆ. ಆ ಲಾಭ ಅವರಿಗೆ ಸೇರಬೇಕು. ಹೈನುಗಾರಿಕೆಗೆ ನೇರವಾದ ಮಾರುಕಟ್ಟೆ ಸಿಗುತ್ತಿರುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗಿದೆ ಎಂದರು.



ಹಾಸನ ಸಹಕಾರಿ ಹಾಲು ಒಕ್ಕೂಟದ ಸಹಾಯಕ ವ್ಯವಸ್ಥಾಪಕ ಎಂ. ದಯಾನಂದ್ ಅವರು ಮಾತನಾಡಿ, 90,970 ಗಳನ್ನು ಬೋನಸ್ ರೂಪದಲ್ಲಿ ವರ್ಷ ಪೂರ್ತಿ ಹಾಲು ಸರಬರಾಜು ಮಾಡಿದ ಪ್ರಮಾಣ ದಂತೆ ಸದಸ್ಯರಿಗೆ ಹಂಚಲಾಗುವುದೆಂದರು.

ಸಂಘದ ಅಧ್ಯಕ್ಷೆ ಪವಿತ್ರ ಮಂಜುನಾಥ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುಖಂಡ ರಾದ ರವಿಕುಮಾರ್, ಅನಂತರಾಜು, ಆಣತಿ ಯೋಗೇಶ್, ಗ್ರಾಪಂ ಅಧ್ಯಕ್ಷೆ ಜಯಮ್ಮ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಮಹೇಶ್, ಗ್ರಾಮ ಪಂಚಾಯಿತಿ ಸದಸ್ಯ ಸಂತೋಷ್, ಪಿಎಂಶ್ರೀ ಹೆಚ್‌ಪಿಜಿ ಶಾಲೆಯ ಮುಖ್ಯ ಶಿಕ್ಷಕಿ ಉಮಾದೇವರಾಜು, ಸಂಘದ ಕಾರ್ಯದರ್ಶಿ ಭಾರತಿ ಕುಮಾರ್, ನಿರ್ದೇಶಕರು, ಸದಸ್ಯರು, ಸಿಬ್ಬಂದಿ ಹಾಜರಿದ್ದರು.

# ಸರ್ಕಾರಿ ಯೋಜನೆಗಳ ಮಾಹಿತಿಗೆ ವೆಬ್‌ಸೈಟ್ ಸಹಕಾರಿ

• ಪ್ರಜೋದಯ ವರದಿ

**ಹಾಸನ:** ವಿದ್ಯಾರ್ಥಿಗಳು ಮತ್ತು ಯುವಕರಿಗೆ ಅನೇಕ ಯೋಜನೆಗಳು ಲಭ್ಯವಿದ್ದು, ಅವುಗಳ ಕುರಿತು ಮಾಹಿತಿಯನ್ನು ಪಡೆದುಕೊಳ್ಳಲು ಸರ್ಕಾರದ ವೆಬ್‌ಸೈಟ್‌ಗಳನ್ನು ನಿಯಮಿತವಾಗಿ ಭೇಟಿ ನೀಡಿ ಎಂದು ಜಿಲ್ಲಾ ಯುವ ಅಧಿಕಾರಿಗಳಾದ ಅಭಿಷೇಕ್ ಚವರೆ ಅವರು ತಿಳಿಸಿದ್ದಾರೆ.

ಭಾರತ ಸರ್ಕಾರದ ಮೇರಾ ಯುವ ಭಾರತ್, ಹಾಸನ, ಸರ್ಕಾರಿ ಗೃಹ ವಿಜ್ಞಾನ ಕಾಲೇಜು, ಹಾಸನ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಹೊಯ್ಸಳ ರೋವರ್ಸ್, ಶಾಂತಲಾ ರೇಂಜರ್ಸ್ ಘಟಕ, ಮಧುಶ್ರೀ ಮಹಿಳಾ ಸಮಾಜ ಹಾಗೂ ಸಂಧ್ಯಾ ರಾಣಿ ಮಹಿಳಾ ಸಮಾಜ, ಹಾಸನ ಇವರ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ಸರ್ಕಾರದ ಪ್ರಧಾನ ಯೋಜನೆಗಳ ಕುರಿತ ಕಾರ್ಯಾಗಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ವೆಬ್‌ಸೈಟ್‌ಗಳನ್ನು ನಿಯಮಿತವಾಗಿ ಭೇಟಿ ನೀಡುವುದರ ಜೊತೆಗೆ ಅದರ ನವೀಕರಣಗಳನ್ನು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರಲ್ಲದೆ, ಮೈ ಭಾರತ್ ಪೋರ್ಟಲ್ ಕುರಿತು ಮಾಹಿತಿಯನ್ನು ಹಂಚಿಕೊಂಡರು.

ಜಿಲ್ಲಾ ಕೌಶಲಾಭಿವೃದ್ಧಿ ಅಧಿಕಾರಿ ವಿಜಯಲಕ್ಷ್ಮಿ ಜೆ.ಬಿ. ಅವರು ಸ್ಕಿಲ್ ಇಂಡಿಯಾ ಕುರಿತು ಮಾತನಾಡಿ, ಯುವಕರಿಗೆ ಲಭ್ಯವಿರುವ ಉದ್ಯೋಗಾವಕಾಶಗಳನ್ನು ವಿವರಿಸಿದರು. ಜೊತೆಗೆ ಪ್ರಧಾನಮಂತ್ರಿ ಕೌಶಲ್ಯ ವಿಕಾಸ ಯೋಜನೆ ಮತ್ತು ಮುಖ್ಯಮಂತ್ರಿ ಕೌಶಲ್ಯ ವಿಕಾಸ ಯೋಜನೆಗಳ ಕುರಿತು ತಿಳಿಸಿದರು.




ಜಿಲ್ಲಾ ಸಂಯೋಜಕರಾದ ಡಾ|| ಪ್ರಸಾದ್‌ಬಾಬು ಅವರು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಕುರಿತು ಮಾತನಾಡಿ, ಹಾಸನ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಹೆಚ್ಚು ಪ್ರಯೋಜನ ಪಡೆಯುತ್ತಿರುವ ಜಿಲ್ಲೆಯಾಗಿ ಅಗ್ರಸ್ಥಾನದಲ್ಲಿದೆ. ಈ ಯೋಜನೆಗೆ ಅಗತ್ಯವಿರುವ ದಾಖಲೆಗಳು, ಅಂಗೀಕೃತ ಆಸ್ಪತ್ರೆಗಳು ಮತ್ತು ಆರೋಗ್ಯ ಮಿತ್ರರ ಪಾತ್ರ ಕುರಿತು ಮಾಹಿತಿಯನ್ನು ನೀಡಿದರು.

ಲೀಡ್ ಬ್ಯಾಂಕ್‌ನ ಹಣಕಾಸು ಸಾಕ್ಷರತಾ ಸಲಹೆಗಾರ ಮಲ್ಲೇಶ್ ಅವರು ಮಾತನಾಡಿ, ಡಿಜಿಟಲ್ ಇಂಡಿಯಾ, ವಿಶೇಷವಾಗಿ ಡಿಜಿಟಲ್ ಬ್ಯಾಂಕಿಂಗ್, ಅಟಲ್ ಪಿಂಚಣಿ ಯೋಜನೆ, ರೂಪೇ ಕಾರ್ಡ್, ವಿಮಾ ಯೋಜನೆಗಳು ಕುರಿತು ವಿವರಿಸಿದರಲ್ಲದೆ, ಯುಪಿಐ ವ್ಯವಹಾರಗಳಲ್ಲಿ ಭಾರತವು ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿದೆ ಎಂದರು.

ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ. ಧನಂಜಯ ಅವರು ಮಾತನಾಡಿ, ಯುವಕರ ಭವಿಷ್ಯದ ದೃಷ್ಟಿಯಿಂದ ಇಂತಹ ಸರ್ಕಾರದ ಯೋಜನೆಗಳು ಅತ್ಯಂತ ಉಪಯುಕ್ತವಾಗಿವೆ ಎಂದು ಅವರು ತಿಳಿಸಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಮಂಜುಳ, ಸಹಾಯಕ ಪ್ರಾಧ್ಯಾಪಕರಾದ ಶಿವಮೂರ್ತಿ ಹಾಗೂ ಡಿ.ಪುಟ್ಟರತ್ನಮ್ಮ ಉಪಸ್ಥಿತರಿದ್ದರು.

## ಕಿತ್ತೂರ ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕ, ಅಹಲ್ಯಬಾಯಿ ಹೋಳ್ಕರ್ ಕುರಿತು ವಿಶೇಷ ಉಪನ್ಯಾಸ

# ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಿಳೆಯರ ತ್ಯಾಗ ಸ್ಮರಣೀಯ

• ಪ್ರಜೋದಯ ವರದಿ

**ಹಾಸನ:** ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಅನೇಕ ಮಹಿಳೆಯರು ಸಮರ್ಪಣಾ ಭಾವದಿಂದ ಭಾಗವಹಿಸಿದ್ದು ಅವರ ತ್ಯಾಗವನ್ನು ಭಾರತದ ಇಂದಿನ ಪೀಳಿಗೆಯು ಸದಾ ಸ್ಮರಿಸಬೇಕು ಎಂದು ಜಿಲ್ಲಾ ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ನಿಕಟ ಪೂರ್ವ ಜಂಟಿ ಕಾರ್ಯದರ್ಶಿ ಹೆಚ್.ಜಿ. ಕಾಂಚನಮಾಲ ತಿಳಿಸಿದರು.

ನಗರದ ಬಿ.ಕಾಟೀಹಳ್ಳಿಯಲ್ಲಿರುವ ಸಂತ ಜೋಸೆಫರ ಕಾಲೇಜಿನ ಪೋಪ್ ಫ್ರಾನ್ಸಿಸ್ ಹಾಲ್‌ನಲ್ಲಿ ಕನ್ನಡ ಸಂಘ ಹಾಗೂ ಐ.ಕ್ಯೂ.ಎ.ಸಿ. ವಿಭಾಗದ ವತಿಯಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ವೀರ ಮಾತೆಯರಾದ ಕಿತ್ತೂರ ರಾಣಿ ಚೆನ್ನಮ್ಮ, ರಾಣಿ ಅಬ್ಬಕ್ಕದೇವಿ, ಮತ್ತು ಅಹಲ್ಯಬಾಯಿ ಹೋಳ್ಕರ್ ಕುರಿತು ಏರ್ಪಡಿಸಲಾಗಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.



ಅನೇಕ ಸಂಸ್ಥಾನದ ರಾಣಿಯರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಪೋರ್ಚುಗೀಸರ ಮತ್ತು ಬ್ರಿಟಿಷರ ದಾಳಿಗಳಿಗೆ ತಮ್ಮ ಪ್ರಾಣವನ್ನು ಕೊಟ್ಟಿದ್ದಾರೆ. ಆ ಮೂಲಕ ತನ್ನ ದೇಶದ ಸ್ವಾಭಿಮಾನದ ಸ್ವಾತಂತ್ರದ ಹೋರಾಟಕ್ಕೆ ಬುನಾದಿ ಹಾಡಿದ್ದಾರೆ. ಅವರೆಲ್ಲರೂ ಪ್ರಾತಃಸ್ಮರಣಿಯರು ಎಂದರಲ್ಲದೆ, ಇಂದಿನ ಎಲ್ಲಾ ಮಹಿಳೆಯರಿಗೆ ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯ ಸ್ಥಾನಮಾನಗಳು ಸಮಾನವಾಗಿ ಹಂಚಿಕೆ ಆಗಬೇಕಾಗಿದೆ ಎಂದು ಹೇಳಿದರು.

ಮಹಿಳಾ ಶೋಷಣೆ ನಿಲ್ಲಬೇಕು. ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಒಗ್ಗಟ್ಟಾಗಿ ಹೋರಾಟ ಮಾಡಿ ಅಧಿಕಾರ ಪಡೆದು ದೇಶದ ಸಂಸ್ಕೃತಿ ಮತ್ತು ಸಂಪತ್ತನ್ನು ರಕ್ಷಿಸಬೇಕು ಇದಕ್ಕಾಗಿ ಅನೇಕ ರಾಣಿಯರ ಸ್ವಾತಂತ್ರ್ಯ ಹೋರಾಟದ ಇತಿಹಾಸ ಗಳನ್ನು ತಿಳಿಯಬೇಕು ಮತ್ತು ಇಂದಿನ ಜನಾಂಗಕ್ಕೂ ತಿಳಿಸಬೇಕಾಗಿದೆ ಎಂದು ಸಲಹೆ ನೀಡಿದರು.

ಕ್ಯಾಂಪಸ್ ಆನಿಮೇಟರ್ ರೆವೆರೆಂಡ್ ಫಾದರ್ ಓಲ್ವಿನ್ ವೇಗಾಸ್ ಎಸ್.ಜೆ. ಅವರು ಮಾತನಾಡಿ, ಕನ್ನಡದ ಮೊದಲ ಅಕ್ಷರ ಅ ಅದರಂತೆ ಎಲ್ಲರಿಗೂ ಅಮ್ಮ, ಅನ್ನ, ಆಹಾರ, ಮೂಲಭೂತ ಅವಶ್ಯಕತೆಯಾಗಿದೆ. ಅದರಂತೆ ಸಂಸ್ಕೃತಿ, ಸಂಸ್ಕಾರ ಮಹಿಳೆಯರಿದಲೇ ಬರುತ್ತದೆ. ರಾಣಿ ಅಬ್ಬಕ್ಕ ದೇವಿ, ರಾಣಿ ಚೆನ್ನಮ್ಮನವರು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದಾರೆ ಎಂ ದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಮ್ಯಾಕ್ಸಿಮ್ ಡಯಾಸ್.ಎಸ್.ಜೆ. ಅವರು ಮಾತನಾಡಿ, ಕುರಿತು ಭಾರತದ ಮಹಿಳೆಯರಿಗೆ ಸ್ವಾಭಿಮಾನ ತನ್ನ ಹುಟ್ಟಿನಿಂದಲೇ ಬಂದಿದೆ. ಅದೇ ರೀತಿ ಎಲ್ಲಾ ರಂಗಗಳಲ್ಲೂ ಮಹಿಳೆ ಸ್ಪರ್ಧೆ ಮಾಡುತ್ತಿದ್ದು ಶೈಕ್ಷಣಿಕ ವಲಯದಲ್ಲಿ ಮಹಿಳೆಯರೇ ಮೊದಲ ಸ್ಥಾನ ಪಡೆಯುತ್ತಿರುವುದು ವಿಶೇಷವಾಗಿದೆ ಎಂದರು.

ಕನ್ನಡ ವಿಭಾಗದ ಮುಖ್ಯಸ್ಥ ಡಿ.ಬಿ.ರಂಗೇಗೌಡ ಆಶಯ ಭಾಷಣ ಮಾಡಿದರು. ಉಪಪ್ರಾಂಶುಪಾಲ ಪ್ರದೀಪ್‌ಕುಮಾರ್, ಕಾಲೇಜಿನ ಹಣಕಾಸು ಅಧಿಕಾರಿ ರೆವೆರೆಂಡ್ ಫಾದರ್ ರೆಯಾನ್ ಪೆರೇರಾ ಎಸ್.ಜೆ. ಮತ್ತು ಮಹಿಳಾ ಸಲಹಾ ಸಮಿತಿ ಸಂಚಾಲಕರಾದ ವೆರೋನಿಕಾ. ಐ.ಕ್ಯೂ.ಎ.ಸಿ. ಸಂಚಾಲಕರಾದ ವೀಣಾ ಹಾಗೂ ಕನ್ನಡ ಉಪನ್ಯಾಸಕ ಮೋಹನ್ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಸಮುದಾಯದ ಅಭಿವೃದ್ಧಿಗೆ ಶಿಕ್ಷಣ ಅಗತ್ಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಯಾವುದೇ ಸಮುದಾಯ ಅಭಿವೃದ್ಧಿ ಹೊಂದಬೇಕೆಂದರೆ ಮುಖ್ಯವಾಗಿ ಶಿಕ್ಷಣ ಇರಬೇಕಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ಪಿ.ಆರ್. ಕಲ್ಯಾಣ ಮಂದಿರದಲ್ಲಿ ಎಸ್ಸಿ, ಎಸ್ಟಿ ಶಿಕ್ಷಕರ ಸಂಘ ಆಯೋಜಿಸಿದ್ದ ಚಿಂತನ, ಮಂಥನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣವೇ ಪ್ರಗತಿ ಪಥದ ಮೂಲ ಮಂತ್ರ. ಪ್ರಜ್ಞಾವಂತ ಸಮಾಜ ನಿರ್ಮಾಣದಿಂದ ಶಾಂತಿಯುತ ಸಹಬಾಳ್ವೆ ಸಹ ನಿರ್ಮಾಣವಾಗುತ್ತದೆ ಎಂದರು.

ಅಂಬೇಡ್ಕರ್‌ರ ಚಿಂತನೆಯಲ್ಲಿ ನೀಡಲಾಗಿರುವ ಮೂಲ ಹಕ್ಕುಗಳಿಂದ ಸಮಾನತೆ ಸಾಧ್ಯವಾಗುತ್ತದೆ. ಇಂದಿನ ಜಾಗತಿಕ ಯುಗದಲ್ಲಿ ವಿದ್ಯೆ ಇದ್ದವರನ್ನು ಯಾರೂ ವಂಚಿಸಲಾಗದು. ಏಕೆಂದರೆ ವಿದ್ಯೆ ಬಲಿಷ್ಟ ಆಯುಧ ಇದ್ದಂತೆ. ವಿದ್ಯಾವಂತರನ್ನಾಗಿ ಮಾಡುವ ಪೋಷಕರು ಮಕ್ಕಳಿಗೆ ಸಂಸ್ಕಾರವನ್ನೂ ಕಲಿಸಬೇಕು. ಆಗ ಮಾತ್ರ ಮಕ್ಕಳಿಂದಲೇ ಹಿರಿಯರ ನಿರ್ಲಕ್ಷ ತಪ್ಪುತ್ತದೆ ಎಂದರು.



ಚನ್ನರಾಯಪಟ್ಟಣದ ಮೊರಾರ್ಜಿ ವಸತಿ ಶಾಲೆ ಉಪನ್ಯಾಸಕ ರತ್ನಾಕರ್ ಅವರು, ಮಾತನಾಡಿ, ಸಮಾಜಿಕ ಪರಿವರ್ತನೆಗೆ ಸಂವಿಧಾನಾತ್ಮಕ ಶಿಕ್ಷಣದ ಪಾತ್ರ ಇದೆ. ಏಕೆಂದರೆ ಇಂದಿನ ಸಮಾಜದಲ್ಲಿನ ಶಾಂತಿ, ನೆಮ್ಮದಿಗೆ ಸಂವಿಧಾನದ ನಿಯಮ ಅಳವಡಿಕೆಯೇ ಕಾರಣವಾಗಿದೆ. ಇದರ ಪ್ರಾಮುಖ್ಯತೆ ಅರಿತು ಪ್ರೌಢ ಹಂತದಲ್ಲೇ ಸಂವಿಧಾನದ ನಿಯಮವನ್ನು ಪರಿಚಯಿಸುವುದು ಬಹು ಮುಖ್ಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಎಸ್ಸಿ ಎಸ್ಟಿ ಶಿಕ್ಷಕರ ರಾಜ್ಯ ಸಂಘದ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುವ ಶಿಕ್ಷಕ ಯತೀಶ್‌ರನ್ನು ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಎಸ್.ಉಮೇಶ್, ಪದಾಧಿಕಾರಿಗಳಾದ ರಾಮಚಂದ್ರಪ್ಪ, ಶಿಕ್ಷಕ ನರಸಿಂಹಮೂರ್ತಿ, ರಂಗಸ್ವಾಮಿ, ಡಿ.ಎಲ್.ನಂದ, ಕಾಂತರಾಜು ಇನ್ನಿತರರು ಉಪಸ್ಥಿತರಿದ್ದರು.

## ಬೇಲೂರು ಕ್ಷೇತ್ರ ಶಿಕ್ಷಣಾಧಿಕಾರಿ ರಾಜೇಗೌಡ ಅಮಾನತು

» ಮೊದಲನೇ ಪುಟದಿಂದ

ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳಿಗೆ ಕರೆ ಮಾಡಿ ಶಿಕ್ಷಕರ ಸಂಘದ ನಿರ್ದೇಶಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅತಿಥಿ, ನಿವೃತ್ತ ಶಿಕ್ಷಕರು ಹಾಗು ಹಳೆಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳಿಗೆ ಹಣ ಕೊಡುವಂತೆ ಪೀಡಿಸುತ್ತಿದ್ದರೆಂದು ಆರೋಪಿಸಲಾಗಿದೆ.

ಜಿಲ್ಲಾ ಪ್ರಶಸ್ತಿ ಪುರಸ್ಕೃತ ಮಹಿಳಾ ಶಿಕ್ಷಕಿಯೊಬ್ಬರಿಗೆ ಮಾಟ ಮಂತ್ರ ಮಾಡಿಸುತ್ತೇನೆಂದು ವಾಟ್ಸ್ ಆ್ಯಪ್‌ನಲ್ಲಿ ಸಂದೇಶ ಕಳುಹಿಸಿರುವುದು. ಶಿಕ್ಷಕರ ದಿನಾಚರಣೆಗೆ ಪರಿಶಿಷ್ಟ ಪಂಗಡದ ಅಧ್ಯಕ್ಷರನ್ನು ಆಹ್ವಾನಿಸದೆ ಅಗೌರವ ತೋರಿರುವುದು. ರಾಜ್ಯ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಡಿ.ಧರ್ಮೇಗೌಡ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು. ತಾಲ್ಲೂಕಿನ ಶಿಕ್ಷಕರಿಗೆ ರಾತ್ರಿ ಕುಡಿದ ಅಮಲಿನಲ್ಲಿ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುವುದು ಹಾಗು ಅವಾಚ್ಯ ಶಬ್ದಗಳಿಂದ ನಿಂದಿಸಿರುವುದು ಹೀಗೆ ಕಾನೂನು ಬಾಹಿರ ಕೃತ್ಯಗಳನ್ನು ಮಾಡುತ್ತಿದ್ದರೆಂಬ ಆರೋಪಗಳನ್ನು ಪರಿಗಣಿಸಿ ರಾಜೇಗೌಡರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

# ಆರಂಭದಲ್ಲೇ ರೋಗಬಾಧೆ ನಿಯಂತ್ರಣಕ್ಕೆ ಕ್ರಮ ವಹಿಸಿ

## ತೆಂಗು ಕಾಯಕಲ್ಪ ರಥಯಾತ್ರೆಗೆ ಸಂಸದ ಚಾಲನೆ | ಇಲಾಖೆ ಸೂಚನೆ ಪಾಲನೆಗೆ ಸಲಹೆ

• ಪ್ರಜೋದಯ ವರದಿ

**ಹಾಸನ:** ತೆಂಗು ಬೆಳೆಗೆ ತಗುಲುವ ರೋಬಾಧೆಯನ್ನು ಪ್ರಾಥಮಿಕ ಹಂತದಲ್ಲಿಯೇ ನಿಯಂತ್ರಿಸಿದರೆ ರೋಗ ಹರಡುವಿಕೆ ತಡೆಗಟ್ಟಬಹುದು. ಈ ನಿಟ್ಟಿನಲ್ಲಿ ಇಲಾಖೆಯ ಸಲಹೆ ಪಡೆದು ಕ್ರಮ ಕೈಗೊಳ್ಳಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ತೆಂಗು ಬೆಳೆಗಾರರಿಗೆ ಸಲಹೆ ನೀಡಿದರು.

ತೆಂಗು ಕಾಯಕಲ್ಪ ರಥಯಾತ್ರೆಗೆ ನಗರದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ತೆಂಗು ಬೆಳೆಗೆ ತಗುಲುತ್ತಿರುವ ರೋಗದ ಕುರಿತಾಗಿ ಜಾಗೃತಿ ಮೂಡಿಸಲು ರಾಜ್ಯ ಸರ್ಕಾರ ರಥಯಾತ್ರೆ ಹಮ್ಮಿಕೊಂಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜರೂರಾಗಿ ತೆಂಗು ಬೆಳೆಗೆ ಹರಡುತ್ತಿರುವ ರೋಗದ ಕುರಿತಾಗಿ ಕ್ರಮ ಕೈಗೊಳ್ಳುತ್ತಿದೆ ಎಂದರು.

ಕೇಂದ್ರ ರೈಲ್ವೆ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆದ ತೆಂಗು ಬೆಳೆ ಸಂರಕ್ಷಣೆ ಸಭೆಯಲ್ಲಿ ಪ್ರಚಾರ ರಥಕ್ಕೆ ವ್ಯವಸ್ಥೆ ಮಾಡುವಂತೆ ಅಭಿಪ್ರಾಯ ಕೇಳಿ ಬಂದಿತ್ತು. ತೆಂಗು ಬೆಳೆಯುವ ಜಿಲ್ಲೆಯ ಸಂಸದರ ಮನವಿ ಮೇರೆಗೆ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಅವರು ಕಾಸರಗೋಡಿನ ತೆಂಗು ಸಂರಕ್ಷಣಾ ಘಟಕ್ಕೆ ಶೀಘ್ರ ಭೇಟಿ ನೀಡಲಿದ್ದಾರೆಂದರು.

ಸಂಸತ್ ಅಧಿವೇಶನದಲ್ಲೂ ಸಮಸ್ಯೆ ಕುರಿತಾಗಿ ಗಮನ ಸೆಳೆಯುತ್ತೇನೆ. ಕೇಂದ್ರ ಮತ್ತು ರಾಜ್ಯ




ಸರ್ಕಾರಗಳು ಈ ರೋಗವನ್ನು ಹತೋಟಿಗೆ ತರಲು ಕ್ರಮ ಕೈಗೊಳ್ಳುತ್ತವೆ. ರೈತರು ಕಾರ್ಯಕ್ರಮದ ಪ್ರಯೋಜನ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ತೋಟಗಾರಿಕೆ ಇಲಾಖೆ ತಾಲ್ಲೂಕು ಹಿರಿಯ ಸಹಾಯಕ ನಿರ್ದೇಶಕರ ಕಚೇರಿ ಭೇಟಿ ನೀಡಬಹುದೆಂದರು.

ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಅವರು ಮಾತನಾಡಿ, ತೆಂಗು ಬೆಳೆಯಲ್ಲಿ ಹಾಸನ ಜಿಲ್ಲೆ ರಾಜ್ಯದಲ್ಲಿ ಎರಡನೇ ಸ್ಥಾನದಲ್ಲಿದೆ. 1.18 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ತೆಂಗು ಬೆಳೆ ಕೈಗೊಳ್ಳಲಾಗಿದೆ. ಪ್ರಸ್ತುತ ಹಲವಾರು ರೋಗಗಳು ತೆಂಗು ಬೆಳೆಯನ್ನು ಕಾಡುತ್ತಿವೆ ಮತ್ತು ಇಳುವರಿ ಕಡಿಮೆಯಾಗುತ್ತಿದೆ. ಹಾಗಾಗಿ ಅದನ್ನುಯಾವ ರೀತಿ ತಡೆಗಟ್ಟಬೇಕು ಎಂಬುದರ ಕುರಿತಾಗಿ ಈ ರಥದ ಮೂಲಕ ಮನವರಿಕೆ ಮಾಡಿಕೊಡಲಾಗುತ್ತಿದೆ ಎಂದರು.

ಜಿಲ್ಲೆಯಾದ್ಯಂತ ಎಲ್ಲಾ ತಾಲ್ಲೂಕುಗಳಲ್ಲಿ ತೆಂಗು ಕಾಯಕಲ್ಪ ರಥ ಪ್ರಚಾರ ಮಾಡಲಿದೆ. ಜಿಲ್ಲೆಯ ಎಲ್ಲಾ ರೈತರು ಸದುಪಯೋಗ ಪಡೆದು ಔಷಧಿ ಮಾಹಿತಿ ಮತ್ತುಯಾವ ರೀತಿ ಅದನ್ನು ಬಳಕೆ ಮಾಡಬೇಕೆಂಬುದರ ಕುರಿತಾಗಿ ತಿಳಿವಳಿಕೆ ಪಡೆಯಬೇಕೆಂದು ಸಲಹೆ ನೀಡಿದರು.

ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಯೋಗೇಶ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಕೆಲವು ವರ್ಷಗಳಿಂದ ತೆಂಗಿನ ಬೆಳೆಯಲ್ಲಿ ಬೇರೆ ಬೇರೆ ಕಾರಣದಿಂದ ರೋಗ ಮತ್ತು ಕೀಟಗಳ ಬಾಧೆ ಹೆಚ್ಚಾಗಿದೆ. ಅದರಿಂದ ಇಳುವರಿ ಕುಂಠಿತವಾಗಿದೆ. ಕಾಂಡ ಸೋರುವ ರೋಗ ಮತ್ತು ಅಣಬೆ ರೋಗ ಹಾಗು ಕಪ್ಪುತಲೆ ಹುಳು, ರುಗೋಸ್ ಬಿಳಿನೊಣ ಕೀಟಗಳು ಹೆಚ್ಚಾಗಿ ಕಂಡು ಬಂದಿದೆ. ಅದಕ್ಕೆ ಔಷದಿಗಳನ್ನು ಇಲಾಖೆಯಿಂದ ವಿತರಿಸಲಾಗುತ್ತಿದೆ. ರೈತರು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಸಂಪರ್ಕಿಸಿ ಪಡೆಯಬಹುದಾಗಿದೆ ಎಂದರು.

ತೆಂಗು ಬೆಳೆಯನ್ನು ಹೆಚ್ಚಾಗಿ ಬಾಧಿಸುವ ಕಪ್ಪುತಲೆ ಹುಳು ರೋಗ ನಿಯಂತ್ರಣಕ್ಕೆ ಪರೋಪಜೀವಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಿ ಜಿಲ್ಲೆಯ ರೈತರಿಗೆ ಉಚಿತವಾಗಿ ವಿತರಿಸುವ ಉದ್ದೇಶದಿಂದ ಅರಸೀಕೆರೆ ಮತ್ತು ಹೊಳೆನರಸೀಪುರ ಪ್ರಯೋಗಾಲಯಗಳನ್ನು ಉನ್ನತೀಕರಣಕ್ಕೆ 3 ಕೋ.ರೂ. ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ತೆಂಗಿನ ಬೆಳೆಯಲ್ಲಿ ಸಮಗ್ರ ರೋಗ ಕೀಟ ನಿಯಂತ್ರಣ ಹಾಗು ಪೋಷಕಾಂಶ ನಿರ್ವಹಣಾ ಪದ್ಧತಿ ಅಳವಡಿಸಿಕೊಳ್ಳಲು ಅವಶ್ಯವಿರುವ ಪರಿಕರಗಳನ್ನು ರೈತರಿಗೆ ಒದಗಿಸಲು 197 ಕೋಟಿ ರೂ. ಪ್ರಸ್ತಾವನೆಯನ್ನು ಹಾಗು ತೆಂಗು ಬೆಳೆಗೆ ಸಮರ್ಪಕವಾಗಿ ನೀರನ್ನು ಪೂರೈಸಲು ಅನುಗುಣವಾಗುವಂತೆ sub surface irrigation system ಅಳವಡಿಸಲು ಸಹಾಯಧನ ವಿತರಣೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆಎಂದು ಮಾಹಿತಿ ನೀಡಿದರು.

ಇದೇ ವೇಳೆ ರೈತರಿಗೆ ಮಾಹಿತಿ ನೀಡುವ ಕರಪತ್ರ ಹಾಗು ಪೋಸ್ಟರ್‌ಬಿಡುಗಡೆ ಮಾಡಲಾಯಿತು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಮಂಜುನಾಥ್, ಸಹಾಯಕ ತೋಟಗಾರಿಕಾ ನಿರ್ದೇಶಕ ತೇಜ್‌ಕುಮಾರ್ ಮತ್ತಿತರರಿದ್ದರು.

## ಸಾಮಾಜಿಕ-ಶೈಕ್ಷಣಿಕ ಸಮೀಕ್ಷೆಗೆ ಜಿಲ್ಲಾಡಳಿತ ಸನ್ನದ್ಧ

» ಮೊದಲನೇ ಪುಟದಿಂದ

ಮತ್ತು 20 ರಂದು ನಡೆಯಲಿದೆ. 50 ಗಣತಿದಾರರಿಗೊಬ್ಬರಂತೆ ಒರ್ವ ಮಾಸ್ಟರ್ ತರಬೇತುದಾರರ ನೇಮಿಸಲಾಗಿದೆ. ಜಿಲ್ಲೆಯ ಆಯಾ ತಾಲ್ಲೂಕು ತಹಶೀಲ್ದಾರ್ ನೇತೃತ್ವದಲ್ಲಿ ಕ್ಲಸ್ಟರ್ ಮಟ್ಟದಲ್ಲಿ ನಿಯೋಜಿಸಲ್ಪಡುವ ಗಣತಿದಾರರಿಗೆ ತರಬೇತಿ ನೀಡಲು ಮೈಕ್ರೋ ಪ್ಲಾನಿಂಗ್ ಮಾಡಿಕೊಳ್ಳಲಾಗಿದ್ದು, ಶಾಲಾ ಅವಧಿಯ ಬಳಿಕವಷ್ಟೇ ಗಣತಿದಾರ ಶಿಕ್ಷಕರಿಗೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ.

ಮುಖ್ಯವಾಗಿ ವಿದ್ಯುತ್ ಮೀಟರ್ ಇರುವಂತಹ ಕುಟುಂಬಗಳನ್ನು ಗುರುತಿಸಲಾಗಿದ್ದು, ಆರ್‌ಆರ್ ಇಲ್ಲದವರ ಮಾಹಿತಿಯನ್ನು ಆಯಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬಿಲ್ ಕಲೆಕ್ಟರ್ ಮತ್ತಿತರ ಸಿಬ್ಬಂದಿ ಮೂಲಕ ಆರ್‌ಆರ್ ರಹಿತ ಕುಟುಂಬಗಳ ಮಾಹಿತಿಯನ್ನು ಕಲೆಹಾಕಿದ್ದಾರೆ. ಆರ್‌ಆರ್ ರಹಿತ ಕುಟುಂಬಗಳನ್ನು ಗ್ರಾಮ ಪಂಚಾಯಿತಿ, ನಾಡ ಕಚೇರಿ ಬಳಿ ಸಮೀಕ್ಷೆಗೊಳಪಡಿಸಲು ಯೋಜಿಸಲಾಗಿದೆ.

**ತಹಶೀಲ್ದಾರ್ ಕಚೇರಿಯಲ್ಲೂ ಅವಕಾಶ :** ಸೆ.22 ರಿಂದ ಅ. 7ರ ವರೆಗೆ ಸಮೀಕ್ಷೆಗಾಗಿ ಗಣತಿದಾರರು ಮನೆಗಳಿಗೆ ಭೇಟಿ ನೀಡಿದಾಗ ಕುಟುಂಬ ಸದಸ್ಯರು ಇಲ್ಲದಿದ್ದರೆ ಅಂತಹವರು ಹತ್ತಿರದ ತಹಶೀಲ್ದಾರ್ ಕಚೇರಿಗೆ ಭೇಟಿ ನೀಡಿ ಮಾಹಿತಿ ಸಲ್ಲಿಸಬಹುದು. ಆಧಾರ್ ಕಾರ್ಡ್ ಹಾಗು ರೇಷನ್ ಕಾರ್ಡ್ ಸಮೀಕ್ಷೆ ವೇಳೆ ಸಲ್ಲಿಸಲು ಸೂಚಿಸಲಾಗಿದೆ.

## ಎರಡು ಸಿಸಿಟಿವಿ ಕ್ಯಾಮರಾ ಕಳವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಪಾತ್ರೆ ಅಂಗಡಿಯ ಎರಡು ಸಿಸಿಟಿವಿ ಕ್ಯಾಮರಾಗಳನ್ನು ಶುಕ್ರವಾರ ಬೆಳಿಗ್ಗೆ ಕದ್ದೊಯ್ದಿರುವ ಘಟನೆ ಪಟ್ಟಣದ ಪೇಟೆ ಮುಖ್ಯ ರಸ್ತೆಯಲ್ಲಿ ನಡೆದಿದೆ. ಬಾಲಾಜಿ ಎಂಬುವವರಿಗೆ ಸೇರಿದ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ಟೋರ್‌ನ ರೋಲಿಂಗ್ ಶೆಲ್ಟರ್ ಬಳಿ ಅಳವಡಿಸಿದ್ದ ಕ್ಯಾಮರಾಗಳನ್ನು ಬೆಳಿಗ್ಗೆ 4 ಗಂಟೆ ಸಮಯದಲ್ಲಿ ಬಿಚ್ಚಿಕೊಂಡು ಹೋಗಿದ್ದಾನೆ. ಕಳ್ಳನ ಚಲನವಲನ ಮತ್ತೊಂದು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಬಾಲಾಜಿ ಅವರು ಪಟ್ಟಣ ಠಾಣೆಗೆ ದೂರು ಸಲ್ಲಿಸಿದ್ದಾರೆ. ಪೇಟೆ ಮುಖ್ಯ ರಸ್ತೆಯಲ್ಲಿರುವ ಮತ್ತೆರಡು ಅಂಗಡಿಗಳಲ್ಲೂ ಸಿಸಿಟಿವಿ ಕ್ಯಾಮರಾ ಕಳ್ಳತನ ಆಗಿದೆ ಎನ್ನಲಾಗಿದೆ. ರಾತ್ರಿ ಪೊಲೀಸ್ ಗಸ್ತು ಹೆಚ್ಚಿಸಿ ಕಳ್ಳರ ಹಾವಳಿಗೆ ಕಡಿವಾಣ ಹಾಕಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.

## ಚ.ರಾ.ಪಟ್ಟಣ-ತಿಪಟೂರಿಗೆ ನೂತನ ಬಸ್ ಸಂಚಾರ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕು ಕೇಂದ್ರದಿಂದ ಬಾಗೂರು, ತಗಡೂರು, ನವಿಲೆ ಹಾಗೂ ಕಾರೇಹಳ್ಳಿ ಮಾರ್ಗವಾಗಿ ತಾಲ್ಲೂಕು ಕೇಂದ್ರ ತಿಪಟೂರಿಗೆ ನೂತನ ಬಸ್ ಸಂಚಾರಕ್ಕೆ ಚಾಲನೆ ನೀಡಲಾಗಿದೆಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ತಗಡೂರು ಗ್ರಾಮದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಚನ್ನರಾಯಪಟ್ಟಣ ಡಿಪೋ ವತಿಯಿಂದ ಪ್ರಾರಂಭಗೊಂಡ ನೂತನ ಬಸ್ ಸಂಚಾರಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಕಳೆದ 6 ವರ್ಷಗಳ ಹಿಂದೆ ಇದೇ ಮಾರ್ಗದಲ್ಲಿ ಬಸ್ ಸಂಚಾರ ಪ್ರತಿನಿತ್ಯ ನಡೆಯುತ್ತಿತ್ತು. ಕೊರೊನಾ ಸಂದರ್ಭದಲ್ಲಿ ಈ ಮಾರ್ಗದ ಸಂಚಾರದಲ್ಲಿ ಬದಲಾವಣೆ ಮಾಡಿ ಬಸ್ಸನ್ನು ನಿಲ್ಲಿಸಲಾಗಿತ್ತು. ಅದರಿಂದ ಈ ಭಾಗದ ಜನರಿಗೆ ಚನ್ನರಾಯಪಟ್ಟಣ ಹಾಗೂ ತಿಪಟೂರು ತಾಲ್ಲೂಕು ಕೇಂದ್ರಗಳಿಗೆ ಹೋಗಲು ತೊಂದರೆಯಾಗುತ್ತಿತ್ತು. ಅದನ್ನು ಮನಗಂಡು ಸಾರಿಗೆ ಸಚಿವರಿಗೆ ಮನವಿ ಮಾಡುವ ಮೂಲಕ ಪುನಃ ನೂತನ ಬಸ್ ಸಂಚಾರಕ್ಕೆ ಚಾಲನೆ ನೀಡಲಾಗಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಡಾ॥ಸೂರಜ್ ರೇವಣ್ಣ ಅವರು ಮಾತನಾಡಿ, ಕ್ಷೇತ್ರದ ಶಾಸಕರಾದ ಬಾಲಕೃಷ್ಣ ಅವರು ನೀರಾವರಿ ಯೋಜನೆ, ಶಿಕ್ಷಣ, ಕೃಷಿ ಸಹಕಾರ ಕ್ಷೇತ್ರದಲ್ಲಿ ಹೆಚ್ಚು ಪ್ರಗತಿ ಸಾಧಿಸಿದ್ದಾರೆ. ನೂತನ ಬಸ್ ಸಂಚಾರಕ್ಕೆ ಕೆಎಸ್‌ಆರ್‌ಟಿಸಿ ನಿಗಮದ ಅಧಿಕಾರಿಗಳು ಶಾಸಕರ ಹಾಗೂ ನಮ್ಮ ಮನವಿ ಮೇರೆಗೆ ಸ್ಪಂದಿಸಿದ್ದಾರೆಂದು ತಿಳಿಸಿದರು.

ತಗಡೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಹೇಮರಾಜ್, ಮಾಜಿ ತಾಲ್ಲೂಕು ಪಂಚಾಯಿತಿ ಸದಸ್ಯ ಓಬಳಾಪುರ ಬಸವರಾಜ್, ಉದ್ಯಮಿ ಅಣತಿ ಯೋಗೇಶ್, ಕೃಷಿ ಪತ್ತಿನ ಅಧ್ಯಕ್ಷೆ ಮಂಜುಳಮ್ಮ, ಮುಖಂಡರಾದ ತಮ್ಮಯಣ್ಣ, ಸಿದ್ದರಟ್ಟಿ ಶಂಕರ್, ಹುಲಿಕೆರೆ ಸಂಪತ್ ಕುಮಾರ್, ಮಂಜಾಬೋವಿ ಸೇರಿ ಇತರರು ಹಾಜರಿದ್ದರು.

## ಜಿಲ್ಲೆಯಲ್ಲಿ ಆನೆಧಾಮ ಸ್ಥಾಪನೆ ಕೈಬಿಡಲು ನಿರ್ಧಾರ

» ಮೊದಲನೇ ಪುಟದಿಂದ

ಬದಲು ಸ್ಥಳೀಯ ಜನರು, ಜನಪ್ರತಿನಿಧಿಗಳು, ಪರಿಸರವಾದಿಗಳೂ ಸೇರಿ ಎಲ್ಲರ ಅಭಿಪ್ರಾಯ ಸಂಗ್ರಹಿಸಲು ತೀರ್ಮಾನಿಸಲಾಗಿದೆ.

ಹೀಗಾಗಿ ಅನೆ ವಿಹಾರ ಧಾಮ ಎಂದರೆ ಏನೆಂಬ ಬಗ್ಗೆ ಮೊದಲು ಸ್ಥಳೀಯರಲ್ಲಿ ಅರಿವು ಮೂಡಿಸಿ, ಅವರ ಒಪ್ಪಿಗೆ ಸಿಕ್ಕ ಬಳಿಕವೇ ಕೇಂದ್ರದ ಅನುಮತಿ ಪಡೆದು ಯೋಜನೆ ಆರಂಭಿಸಲು ತೀರ್ಮಾನ ಕೈಗೊಳ್ಳಲಾಗಿದೆ.

**ಮುತ್ತೋಡಿಯೂ ಸೂಕ್ತವಲ್ಲ**

ಬಿಸಿಲೆಘಾಟ್ ಸಮೀಪ ಅನೆ ವಿಹಾರ ಧಾಮ ಬೇಡವೆಂದು ತೀರ್ಮಾನಿಸಿದ ಬಳಿಕ ಭದ್ರಾ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮುತ್ತೋಡಿ ಭಾಗದಲ್ಲಿ ಆರಂಭಿಸುವ ಬಗ್ಗೆ ಚರ್ಚೆಗಳು ಆರಂಭಗೊಂಡಿದ್ದವು. ಆದರೆ, ಕಾಡಾನೆ ಹಾವಳಿ ಹೆಚ್ಚುತ್ತಿರುವುದು ಅರೆ ಮಲೆನಾಡು ಹಾಗು ಕಾಫಿ ತೋಟಗಳು ಹೆಚ್ಚಾಗಿರುವ ಪ್ರದೇಶದಲ್ಲಿ ಈ ಆನೆಗಳು ಹುಟ್ಟಿ ಬೆಳೆದಿರುವುದು ಊರುಗಳ ಸಮೀಪವೇ. ಅವುಗಳಿಗೆ ದಟ್ಟಾರಣ್ಯದ ಪರಿಚಯವೇ ಇರುವುದಿಲ್ಲ. ಹೀಗಿರುವಾಗ ಆನೆಗಳನ್ನು ಸೆರೆ ಹಿಡಿದು ದಟ್ಟಾರಣ್ಯದ ನಡುವೆ ಬಿಟ್ಟಾಗ ಅವುಗಳಿಗೆ ತೊಂದರೆಯಾಗುವ ಸಾಧ್ಯತೆಯೇ ಹೆಚ್ಚಿದೆ ಎಂಬ ಅಭಿಪ್ರಾಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ತಜ್ಞರಿಂದ ಕೇಳಿ ಬಂದಿದೆ. ಈಗಾಗಲೇ ಭದ್ರಾ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ 400ಕ್ಕೂ ಹೆಚ್ಚು ಕಾಡಾನೆಗಳಿವೆ. ಇದರ ಮಧ್ಯೆ ನಾಡಿನ ಸಮೀಪವೇ ಹುಟ್ಟಿ ಬೆಳೆದ ಆನೆಗಳನ್ನು ಸೆರೆ ಹಿಡಿದು ಈ ಭಾಗಕ್ಕೆ ಬಿಟ್ಟಾಗ ಆನೆಗಳ ನಡುವೆ ಘರ್ಷಣೆ ನಡೆದಲ್ಲಿ ಸೆರೆ ಹಿಡಿದ ಆನೆಗಳು ಮೃತಪಡುವ ಸಾಧ್ಯತೆ ಇರುವುದರಿಂದ ಮುತ್ತೋಡಿಯಲ್ಲೂ ಆನೆ ವಿಹಾರ ಧಾಮ ಬೇಡವೆಂಬ ತೀರ್ಮಾನಕ್ಕೆ ಬರಲಾಗಿದೆ ಎನ್ನಲಾಗಿದೆ.

**ಏನಿದು ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್**

ಇತ್ತೀಚೆಗೆ ಗ್ರಾಮಗಳತ್ತ ಬರುವ ಆನೆಗಳ ಸಂಖ್ಯೆ ದುಪ್ಪಟ್ಟಾಗಿದೆ. ಅಂತಹ ಆನೆಗಳನ್ನು ಹಿಡಿದು ಆನೆ ಕ್ಯಾಂಪ್‌ಗಳಲ್ಲಿ ಇರಿಸುವುದು ಕಷ್ಟ. ಜೊತೆಗೆ ಕ್ಯಾಂಪ್‌ಗಳಲ್ಲಿ ಅಷ್ಟೊಂದು ಸ್ಥಳಾವಕಾಶವೂ ಇರುವುದಿಲ್ಲ. ಹೀಗಾಗಿ ಕಾಫಿ ತೋಟ ಹಾಗು ಗ್ರಾಮಗಳ ಸುತ್ತಮುತ್ತಲೇ ಸಂಚಾರ ನಡೆಸುವ ಆನೆಗಳನ್ನು ಸೆರೆ ಹಿಡಿದು ಒಂದು ನಿರ್ದಿಷ್ಟ ಪ್ರದೇಶದಲ್ಲಿ ಬಿಡಲಾಗುತ್ತದೆ. ಅದನ್ನೇ ಆನೆ ವಿಹಾರ ಧಾಮ (ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್) ಎನ್ನಲಾಗುತ್ತದೆ. ಹೀಗೆ ಸೆರೆ ಹಿಡಿದು ಬಿಡುವ ಆನೆಗಳಿಗೆ ಅಲ್ಲಿ ನೈಸರ್ಗಿಕವಾಗಿಯೇ ಸೂಕ್ತ ಆಹಾರ ಸಿಗುವಂತೆ ನೋಡಿಕೊಳ್ಳಲಾಗುತ್ತದೆ.

## ವಾಣಿಜ್ಯ ಮಳಿಗೆ ಇ-ಹರಾಜು ನಿಲ್ಲಿಸಲು ಒತ್ತಾಯ

• ಪ್ರಜೋದಯ ವರದಿ

**ಹಾಸನ:** ನಗರದ ಕಟ್ಟಿನಕೆರೆ ಮಾರುಕಟ್ಟೆಯಲ್ಲಿರುವ ಮಹಾನಗರ ಪಾಲಿಕೆ ವ್ಯಾಪ್ತಿಯ ವಾಣಿಜ್ಯ ಮಳಿಗೆಗಳ ಇ-ಹರಾಜು ಪ್ರಕ್ರಿಯೆ ನಿಲ್ಲಿಸುವಂತೆ ಒತ್ತಾಯಿಸಿ ಅಂಗಡಿ ವ್ಯಾಪಾರಸ್ಥರು ಶುಕ್ರವಾರ ಪ್ರತಿಭಟನೆ ನಡೆಸಿದರು.

ನಗರದ ಪ್ರವಾಸಿ ಮಂದಿರದ ಆವರಣಕ್ಕೆ ಜಮಾಯಿಸಿದ ವ್ಯಾಪಾರಸ್ಥರು ಇ-ಹರಾಜು ಪ್ರಕ್ರಿಯೆ ನಡೆಸದಂತೆ, ಈಗ ವ್ಯಾಪಾರ ಮಾಡುತ್ತಿರುವವರನ್ನೇ ಮುಂದುವರೆಸುವಂತೆ ಒತ್ತಾಯಿಸಿ ಸಂಸದ ಶ್ರೇಯಸ್ ಪಟೇಲ್ ಅವರಿಗೆ ಮನವಿ ಸಲ್ಲಿಸಿದರು.



ಕಟ್ಟಿನಕೆರೆ ಮಳಿಗೆಗಳ ಮಾಲೀಕರ ಸಂಘದ ಉಪಾಧ್ಯಕ್ಷ ರಾಜೀವ್ ಅವರು ಮಾತನಾಡಿ, ಮಾರುಕಟ್ಟೆಯಲ್ಲಿ ಒಟ್ಟು 487 ಮಳಿಗೆಗಳಿವೆ. ಇ-ಹರಾಜು ಪ್ರಕ್ರಿಯೆ ಮಾಡುವುದರಿಂದ ಹಳೆಯ ಬಾಡಿಗೆದಾರರಿಗೆ ತೊಂದರೆಯಾಗುತ್ತದೆ. ಮಾರುಟ್ಟೆಯಲ್ಲಿನ ಬಾಡಿಗೆದಾರರು ಹೆಚ್ಚಾಗಿ ಅನಕ್ಷರಸ್ಥರು ಹಾಗು 60 ವರ್ಷ ಮೇಲ್ಪಟ್ಟ ಹಿರಿಯರಾಗಿರುವುದರಿಂದ ಅವರಿಗೆ ಇ-ಹರಾಜಿನ ಪ್ರಕ್ರಿಯೆ ಅರ್ಥವಾಗುವುದಿಲ್ಲ. 487 ಮಳಿಗೆಗಳನ್ನು ನಂಬಿಕೊಂಡು 2 ಸಾವಿರ ಕುಟುಂಬಗಳು ಜೀವನ ಮಾಡುತ್ತಿವೆ. ಈ ರೀತಿ ಹರಾಜು ಮಾಡುವುದರಿಂದ ವ್ಯಾಪಾರಸ್ಥರಿಗೆ ಸಮಸ್ಯೆಯಾಗುತ್ತದೆ ಎಂದರು.

ಕೊರೊನಾ ಸಮಯದಲ್ಲಿ ಮೂರು ವರ್ಷ ವ್ಯವಹಾರ ಸ್ಥಗಿತವಾಗಿದ್ದರಿಂದ ವ್ಯಾಪಾರಸ್ಥರು ಸಾಲದ ಹೊರೆ ಹೊತ್ತುಕೊಂಡು ಜೀವನ ನಿರ್ವಹಣೆ ಮಾಡಲು ಕಷ್ಟಪಡುವಂತಾಗಿದೆ. ತಕ್ಷಣ ಮಳಿಗೆ ಖಾಲಿ ಮಾಡಿಸಿದರೆ ನಿರುದ್ಯೋಗ, ಸಾಲ ಪಾವತಿಸಲು ಅಸಾಧ್ಯವಾಗುತ್ತದೆ. ಹಾಗಾಗಿ ಮಾನವೀಯ ನೆಲೆಯಲ್ಲಿ ಪ್ರಸ್ತುತ ಇರುವ ಅಂಗಡಿ ವ್ಯಾಪಾರಸ್ಥರಿಗೆ ಮಳಿಗೆ ಬಾಡಿಗೆ ಹೆಚ್ಚಿಸಿ ಅವರನ್ನೇ ಮುಂದುವರಿಸಲು ಅವಕಾಶ ನೀಡಬೇಕು. ಯಾವುದೇ ಇ-ಹರಾಜು ಹರಾಜು ಪ್ರಕ್ರಿಯೆ ನಡೆಸದಂತೆ ಕೋರಿ ಕೊಂಡರು.

ಸಂಘದ ಗೌರವ ಅಧ್ಯಕ್ಷ ಜ್ವಾಲಣ್ಣ, ಅಧ್ಯಕ್ಷ ವೆಂಕಟೇಶ್, ಸತೀಶ, ಕಿರಣ, ಸ್ವಾಮಿಗೌಡ, ಬಂಗಾರಿ, ಷಡಾಕ್ಷರಿ, ವಿಶ್ವನಾಥ, ರಘು, ರಾಜಣ್ಣ ಇತರರು ಹಾಜರಿದ್ದರು.

## ಸಿಎಂಗೆ ನಿಂದನೆ: ಮಾಜಿ ಯೋಧನ ಬಂಧನ

» ಮೊದಲನೇ ಪುಟದಿಂದ

ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ವ್ಯಕ್ತಿಯ ವಿರುದ್ಧ ಅವಹೇಳನಕಾರಿ, ನಿಂದನಾತ್ಮಕ ಅಥವಾ ತಪ್ಪು ಮಾಹಿತಿ ಹಂಚಿದರೆ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಸಾಮಾಜಿಕ ಜಾಲತಾಣಗಳಲ್ಲಿ ನಿಂದನೆಗೆ ಸಂಬಂಧಿಸಿದಂತೆ ಭಾರತೀಯ ದಂಡ ಸಂಹಿತೆ ಸೆಕ್ಷನ್ 153ಎ ಧರ್ಮ, ಜಾತಿ, ಭಾಷೆ ಆಧಾರಿತ ವೈಮನಸ್ಯ ಉಂಟು ಮಾಡುವ ಬರಹ, ಪ್ರಸಾರ, ಸೆಕ್ಷನ್ 505(2) ಸಮಾಜದಲ್ಲಿ ಗೊಂದಲ, ಶಾಂತಿ ಭಂಗ ಉಂಟುಮಾಡುವ ಹೇಳಿಕೆ ಅಥವಾ ವದಂತಿ ಹರಡುವುದು, ಐಟಿ ಕಾಯ್ದೆ-ಸೆಕ್ಷನ್66, ಸೆಕ್ಷನ್67 ಅಶ್ಲೀಲ, ಅವಹೇಳನಕಾರಿ ಅಥವಾ ನಿಂದನಾತ್ಮಕ ವಿಷಯಗಳನ್ನು ಹಂಚಿದರೆ ಶಿಕ್ಷೆಗೆ ಒಳಪಡುವುದೆಂದು ಪೊಲೀಸರು ತಿಳಿಸಿದ್ದಾರೆ.

## ಬ್ಯಾಡ್ಮಿಂಟನ್ : ಸಿಂಧುಗೆ ಸೋಲು

**ಶೆಂಜೆನ್ (ಚೀನಾ):** ಚೀನಾ ಮಾಸ್ಟರ್ಸ್ ಸೂಪರ್750 ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸೋಲು ಅನುಭವಿಸಿರುವ ಭಾರತದ ಅಗ್ರ ಆಟಗಾರ್ತಿ ಪಿ.ವಿ.ಸಿಂಧು ಕೂಟದಿಂದಲೇ ನಿರ್ಗಮಿಸಿದ್ದಾರೆ.

ಮಹಿಳಾ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ಸಿಂಧು ಅವರು ವಿಶ್ವ ನಂ.1 ಆಟಗಾರ್ತಿ ಕೊರಿಯಾದ ಆ್ಯನ್ ಸೆ ಯಂಗ್ ವಿರುದ್ಧ 14-21 13-21ರ ಅಂತರದಲ್ಲಿ ಸೋಲು ಅನುಭವಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಚಿನ್ನ ವಿಜೇತೆ 23 ವರ್ಷದ ಆ್ಯನ್ ಸೆ ಯಂಗ್ ಅವರು 38 ನಿಮಿಷಗಳಲ್ಲೇ ಪಂದ್ಯ ವಶಪಡಿಸಿಕೊಂಡಿದ್ದಾರೆ. ಇದು ಆ್ಯನ್ ಸೆ ಯಂಗ್ ವಿರುದ್ಧ 2 ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಅವರಿಗೆ ಎದುರಾದ ಸತತ 8ನೇ ಸೋಲು ಆಗಿದೆ.

## ಗಾಂಜಾ ಗಿಡ ಬೆಳೆದಿದ್ದವನ ಬಂಧನ

• ಪ್ರಜೋದಯ ವರದಿ

**ಬೇಲೂರು:** ಜಮೀನು ಮಾಲೀಕರಿಗೆ ಗೊತ್ತಾಗದಂತೆ ಗಾಂಜಾ ಗಿಡ ಬೆಳೆದಿದ್ದ ಆರೋಪಿ ಯನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಳೇಬೀಡು ಹೋಬಳಿ ಕಲ್ಲುಶೆಟ್ಟಿಹಳ್ಳಿ ಗ್ರಾಮದ ವೆಂಕಟೇಶ ಬಂಧಿತ ಆರೋಪಿ. ದೊಡ್ಡ ಬ್ಯಾಡಿಗೆರೆಯ ಮಲ್ಲಿಕಾರ್ಜುನ ಎಂಬುವವರಿಗೆ ಸೇರಿದ ಶುಂಠಿ ಹೊಲದಲ್ಲಿ ವೆಂಕಟೇಶ್ ಯಾರ ಗಮನಕ್ಕೂ ಬಾರದಂತೆ ಗಾಂಜಾ ಗಿಡ ಬೆಳೆದಿದ್ದ. ಖಚಿತ ಮಾಹಿತಿ ಮೇರೆಗೆ ಪೊಲೀಸರು ದಾಳಿ ನಡೆಸಿದಾಗ ಆರೋಪಿ ಸಿಕ್ಕಿಬಿದ್ದಿದ್ದಾನೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಹೆದ್ದಾರಿ ಗ್ರಿಲ್ ಬೇಲಿಗೆ ಬಣ್ಣ ಬಳಿಯಲು ಮನವಿ

• ಪ್ರಜೋದಯ ವರದಿ

**ಅರಸೀಕೆರೆ:** ನಗರದ ಮೂಲಕ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 206 ಟಿಎಚ್ ರಸ್ತೆ ಸೇರಿ ನಗರ ವ್ಯಾಪ್ತಿಗೆ ಬರುವ ಹಾಸನ ರಸ್ತೆಯ ರಸ್ತೆ ಮಧ್ಯೆ ನಗರಸಭೆ ಅಳವಡಿಸಿರುವ ಗ್ರಿಲ್ ಬೇಲಿಗೆ ಹಳದಿ ಮತ್ತು ಕೆಂಪು ಬಣ್ಣವನ್ನು ಬಳಿಯುವಂತೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಸೇರಿ ನಗರ ಸಭೆ ಅಧ್ಯಕ್ಷರು ಮತ್ತು ಪೌರಾಯುಕ್ತರಿಗೆ ಕರವೇ ಕಾರ್ಯಕರ್ತರು ಮನವಿ ಪತ್ರ ಸಲ್ಲಿಸಿದರು.




ಕರವೇ ಕಾರ್ಯಕರ್ತರ ಮನವಿ ಆಲಿಸಿದ ಶಾಸಕ ಶಿವಲಿಂಗೇಗೌಡ ಅವರು ಮಾತನಾಡಿ, ತಮ್ಮ ಮನವಿ ಅರ್ಥಪೂರ್ಣವಾಗಿದ್ದು, ಈ ಸಂಬಂಧ ನಗರಸಭೆ ಅಧ್ಯಕ್ಷರು ಮತ್ತು ಪೌರಾಯುಕ್ತರೊಂದಿಗೆ ಸಮಾಲೋಚಿಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ಕರವೇ ತಾಲ್ಲೂಕು ಅಧ್ಯಕ್ಷ ಕಿರಣ್ ಕುಮಾರ್ ನೇತೃತ್ವದ ಮುಖಂಡರಿಗೆ ಭರವಸೆ ನೀಡಿದರು.

ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾ ಅವರು ಪ್ರತಿಕ್ರಿಯಿಸಿ, ಕನ್ನಡ ಧ್ವಜಕ್ಕೆ ಗೌರವ ಸಲ್ಲಿಸು ವುದು, ನಾಡಿನ ಸಂಸ್ಕೃತಿಯನ್ನು ಪಾಲಿಸುವುದು ಹಾಗೂ ಕಲೆ, ಸಾಹಿತ್ಯ ಮತ್ತು ಕಲಾವಿದರನ್ನು ಪೋಷಿಸುವುದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಕನ್ನಡ ಅಭಿಮಾನ ಮೂಡಿಸುವ ಹಾಗೂ ಬೆಂಬಲಿಸುವ ಎಲ್ಲಾ ಕೆಲಸಕಾರ್ಯಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಕ್ಕೆ ತರಲು ನಗರ ಸಭೆ ಆಡಳಿತ ಬದ್ಧವಾಗಿದೆ ಎಂದರು.

ತಾಲ್ಲೂಕು ಕರವೇ ಅಧ್ಯಕ್ಷ ಕಿರಣ್ ಕುಮಾರ್ ಅವರು ಮಾತನಾಡಿ, ರಸ್ತೆ ವಿಭಜಕದ ಮಧ್ಯೆ ಅಳವಡಿಸಿರುವ ಕಬ್ಬಿಣದ ಸರಪಳಿ ತಡೆಗೋಡೆಗೆ ಹಳದಿ ಮತ್ತು ಕೆಂಪು ಬಣ್ಣ ಬಳಿಯುವ ಜೊತೆಗೆ ಸರ್ಕಾರಿ ಕಟ್ಟಡಗಳ ಮೇಲೆ, ಸಾರ್ವಜನಿಕ ಸ್ಥಳಗಳಲ್ಲಿ ನಾಡಿನ ಸಂಸ್ಕೃತಿ ಸಾರುವ ಹಾಗೂ ಸಾಹಿತಿಗಳು, ಕನ್ನಡ ಪರ ಹೋರಾಟಗಾರರ ಚಿತ್ರಗಳನ್ನು ಬಿಡಿಸಿ ಮಕ್ಕಳಲ್ಲಿ ಕನ್ನಡ ಅಭಿಮಾನದ ಜೊತೆಗೆ ನಾಡು ನುಡಿಗಾಗಿ ಶ್ರಮಿಸಿದ ಮಹನೀಯರ ಕಿರು ಪರಿಚಯ ಮಾಡಿಕೊಡುವ ಕೆಲಸವನ್ನು ನಗರಸಭೆ ಮಾಡಿಕೊಡುವ ಮೂಲಕ ಕನ್ನಡ ಅಭಿಮಾನ ಮೆರೆಯುವಂತೆ ಮನವಿ ಮಾಡಿದರು.

ಕರವೇ ನಗರ ಅಧ್ಯಕ್ಷ ಸಂತೋಷ್, ಕಾಂಗ್ರೆಸ್ ಮುಖಂಡ ಮಂಜುರಾಜ್, ನಗರಸಭೆ ಸದಸ್ಯ ವೆಂಕಟಮುನಿ, ಕರವೇ ಸಂಘಟನೆಯ ಪದಾಧಿಕಾರಿಗಳಾದ ಶೇಖರ ಉಪಸ್ಥಿತರಿದ್ದರು.

## ಧರ್ಮ ಕಾಲಂನಲ್ಲಿ ಬೌದ್ಧ ಎಂದೇ ಬರೆಸಿ

• ಪ್ರಜೋದಯ ವರದಿ

**ಹಾಸನ:** ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ನಡೆಸಲಾಗುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಧರ್ಮದ ಕಾಲಂನಲ್ಲಿ ಬೌದ್ಧ ಎಂದು ಬರೆಸುವಂತೆ ದಲಿತ ಮುಖಂಡ ಹೆಚ್.ಕೆ.ಸಂದೇಶ್ ಅವರು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ಸೆ.22 ರಿಂದ ಅ.7ರವರೆಗೆ ಜಾತಿಗಣತಿ ನಡೆಯಲಿದೆ. ಪರಿಶಿಷ್ಟ ಜಾತಿಯಲ್ಲೇ ಮುಂದುವರಿಯಲು ಇಚ್ಛಿಸುವವರು ಕರ್ನಾಟಕ ಜಾತಿ ಗಣತಿ ಧರ್ಮದ ಕಾಲಂ 8ರ ಕ್ರಮ ಸಂಖ್ಯೆ 6ರಲ್ಲಿರುವ ಬೌದ್ಧ ಎನ್ನುವುದನ್ನು ಆಯ್ಕೆ ಮಾಡಿಕೊಳ್ಳಬೇಕು. ಕಾಲಂ 9ರಲ್ಲಿರುವ ಪರಿಶಿಷ್ಟ ಜಾತಿ ಅವಕಾಶ ಆಯ್ಕೆ ಮಾಡಿ, ನಂತರದ 10 ರಲ್ಲಿರುವ ಉಪಜಾತಿ ಕಾಲಂನಲ್ಲಿ ತಮ್ಮ ಮೂಲಜಾತಿ (ಪರಿಶಿಷ್ಟ ಜಾತಿಯ 101 ಕಾಲಂನಲ್ಲಿ ಬರುವ ಮೂಲ ಜಾತಿ/ತಾವು ಪಡೆದಿರುವ ಜಾತಿ ಪ್ರಮಾಣ ಪತ್ರದಲ್ಲಿ ದಾಖಲಾಗಿರುವ ಜಾತಿ) ಯನ್ನು ನಮೂದು ಮಾಡಬೇಕೆಂದು ಸಲಹೆ ನೀಡಿದರು.

ಈ ಮೂಲಕ ಸಂವಿಧಾನದತ್ತ ಮೀಸಲಾತಿ ಹಕ್ಕಿನೊಡನೆ ತಮ್ಮ ಮೂಲ ಧರ್ಮವಾದ ಬೌದ್ಧ ಧರ್ಮಕ್ಕೆ ಮರಳುವ ಮೂಲಕ ಅಂಬೇಡ್ಕರ್ ಅವರು ನಮ್ಮ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುವುದರ ಜೊತೆಗೆ ಅವರಿಗೆ ಗೌರವ ಸಲ್ಲಿಸುವಂತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಮುಖಂಡರಾದ ಎಂ.ಸೋಮಶೇಖರ್, ಅಂಬುಗ ಮಲ್ಲೇಶ್, ರಾಜಶೇಖರ್, ಜಗದೀಶ್ ಚೌಡಳ್ಳಿ ಇತರರಿದ್ದರು.



## ಸಹಕಾರ ಕ್ಷೇತ್ರ, ಗಣಕೀಕರಣಗೊಳಿಸುವತ್ತ ಹೆಜ್ಜೆ

» ಮೊದಲನೇ ಪುಟದಿಂದ

ಸಹಕಾರಿ ಕ್ಷೇತ್ರ, ಬೆಳೆಯಲು ಪ್ರಾಮಾಣಿಕತೆ ಮತ್ತು ಪಾರದರ್ಶಕತೆ ಮುಖ್ಯ. ರೈತರ ಬೇಡಿಕೆಯ ಮೇರೆಗೆ ಎರಡು ವರ್ಷಗಳ ಹಿಂದೆ 2 ಕೋ.ರೂ. ಬೆಳೆಸಾಲ ಮತ್ತು 1 ಕೋ. 35 ಲಕ್ಷ ರೂ. ವ್ಯವಹಾರ ಸಾಲ ನೀಡಲಾಗಿದೆ. ರೈತರ ಜೀವನೋಪಾಯ ಸುಧಾರಣೆಗೆ ಸಹಕಾರಿ ಸಂಘ ಮಹತ್ತರ ಪಾತ್ರ ವಹಿಸುತ್ತಿದೆ. ಕೇಂದ್ರ ಸರ್ಕಾರ ನಬಾರ್ಡ್ ಬ್ಯಾಂಕ್ ಮೂಲಕ ರೈತರಿಗೆ ಸಾಲ ಸೌಲಭ್ಯ ಒದಗಿಸುವುದರ ಜೊತೆಗೆ ಬೀಜೋಪಚಾರ, ರಸಗೊಬ್ಬರ, ಕೃಷಿ ಸಾಧನ ವಿತರಣೆ ಮುಂತಾದ ಕೃಷಿ ಚಟುವಟಿಕೆಗಳಿಗೆ ಬಹು ಸೇವಾಕೇಂದ್ರಗಳ ಮೂಲಕ ನೆರವು ನೀಡುತ್ತಿದೆ ಎಂದರು.

ಹೆಚ್‌ಡಿಸಿಸಿ ಬ್ಯಾಂಕ್ ಹಾಗು ಸಹಕಾರಿ ಹಾಲು ಒಕ್ಕೂಟಗಳು ರೈತರು ಹಾಗೂ ಸಾರ್ವಜನಿಕರ ಹಿತದೃಷ್ಟಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿವೆ. ಸಹಕಾರ ಚಳುವಳಿ ಇನ್ನಷ್ಟು ಬಲವಾಗಿ ಬೆಳೆಯಲು ಎಲ್ಲರೂ ಸಹಕಾರ ನೀಡಬೇಕೆಂದು ಕರೆ ನೀಡಿದ ಅವರು, ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇಡೀ ಜಿಲ್ಲೆಯಲ್ಲಿ ಸ್ವಂತ ಬಂಡವಾಳ ತೊಡಗಿಸಿಕೊಳ್ಳುವ ಮೂಲಕ ಉತ್ತಮ ಹೆಸರು ಗಳಿಸಿದೆ. ಸಹಕಾರಿ ಸಂಘಗಳು ರೈತರ ಹಿತದೃಷ್ಟಿಯಿಂದ ಕಾರ್ಯನಿರ್ವಹಿಸುವುದು ಅತ್ಯಂತ ಮುಖ್ಯ ಎಂದರು.

ಜಿಲ್ಲಾ ಬ್ಯಾಂಕ್ ಪ್ರತಿ ವರ್ಷ ಸುಮಾರು 75 ಲಕ್ಷ ರೂ. ವೆಚ್ಚದಲ್ಲಿ ರೈತರಿಗೆ ಆರೋಗ್ಯ ವಿಮೆ ಮಾಡಿಸುತ್ತಿದೆ. ಇದುವರೆಗೆ ಎರಡು ಕೋಟಿ ರೂ.ಗೂ ಮೀರಿದಷ್ಟು ರೈತರು ಇದರ ಪ್ರಯೋಜನ ಪಡೆದು ಕೊಂಡಿದ್ದಾರೆ. ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮಹಿಳಾ ಸ್ವಸಹಾಯ ಸಂಘಗಳಿಗೆ ಕಡಿಮೆ ಬಡ್ಡಿಯಲ್ಲಿ 5 ಲಕ್ಷ ರೂ. ಸಹಾಯವನ್ನು ಸಹಕಾರ ಸಂಘಗಳ ಮೂಲಕ ನೀಡಿದ ಯೋಜನೆಯನ್ನು ಸ್ಮರಿಸಿದರು.

ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಬಿ.ಬಿ.ಲೋಕೇಶ್ ಅವರು ಮಾತನಾಡಿ, ನಮ್ಮ ಸಂಘವು ಪ್ರಸಕ್ತ ವರ್ಷದಲ್ಲಿ 13,63.155 ಲಕ್ಷ ಲಾಭ ಗಳಿಸಿದೆ. ಕೃಷಿಯೇತರ ಸಾಲವಾಗಿ 5 ಕೋ.ರೂ.ಗೂ ಹೆಚ್ಚು ಸಾಲ ನೀಡಿದ್ದೇವೆ. ರೈತರಿಗೆ 2024-25 ಸಾಲಿನಲ್ಲಿ 75 ಲಕ್ಷದಷ್ಟು ರಸಗೊಬ್ಬರ ಒದಗಿಸಲಾಗಿದೆ. ಸಂಘದಿಂದ 360 ಕುಟುಂಬಗಳಿಗೆ ಯಶಸ್ವಿನಿ ಆರೋಗ್ಯ ವಿಮೆ ನೋಂದಣಿ ಮಾಡಲಾಗಿದೆ ಎಂದು ತಿಳಿಸಿದರು.

ಈ ವೇಳೆ ಸಂಘದ ವತಿಯಿಂದ ನಡೆಯುತ್ತಿರುವ ನ್ಯಾಯಬೆಲೆ ಅಂಗಡಿಯಲ್ಲಿ ನಡೆದ ಅಕ್ರಮ ಮತ್ತು ಸಂಘದ ಜಾಗ ಒತ್ತುವರಿ ಕುರಿತು ಸದಸ್ಯರು ಹಾಗು ನಿರ್ದೇಶಕರ ನಡುವೆ ಜಟಾಪಟಿ ಏರ್ಪಟ್ಟಿತ್ತು. ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಕಬ್ಬಿನಹಳ್ಳಿ ಜಗದೀಶ್, ಜಮ್ಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ಉಷಾರಾಣಿ, ನಿರ್ದೇಶಕರಾದ ವೈ.ಡಿ.ಬಸವರಾಜು ಬಿ.ಬಿ.ಮಂಜುನಾಥ್, ಎಂ.ಎಸ್.ಚಂದ್ರಶೇಖರ್, ಎಂ. ಆರ್.ಉದಯಶಂಕರ್, ನೇತ್ರಾವತಿ ಇತರರು ಉಪಸ್ಥಿತರಿದ್ದರು.

## ವಿರಾಮದ ಬಳಿಕ ಮತ್ತೆ ವಾಪಾಸ್ಸಾತಿ : ನೀರಜ್ ಚೋಪ್ರಾ

• ಪ್ರಜೋದಯ ವರದಿ

**ನವದೆಹಲಿ:** ಈ ಬಾರಿಯ ವಿಶ್ವ ಜಾವೆಲಿನ್ ಚಾಂಪಿಯನ್‌ಶಿಪ್ ಅನ್ನು ಅಂದುಕೊಂಡಂತೆ ಮುಕ್ತಾಯಗೊಳಿಸಲು ಸಾಧ್ಯವಾಗಲಿಲ್ಲ, ಆದರೆ ವಿರಾಮದ ಬಳಿಕ ಮತ್ತೆ ಬಲವಾಗಿ ವಾಪಾಸ್ಸಾತಿ ಮಾಡುವುದಾಗಿ ನೀರಜ್‌ಚೋಪ್ರಾ ಅವರು ಶುಕ್ರವಾರ ಹೇಳಿದರು.



ಗುರುವಾರ ಮುಕ್ತಾಯಗೊಂಡ ವಿಶ್ವ ಚಾಂಪಿಯನ್‌ಶಿಪ್ ಫೈನಲ್‌ನ ಐದನೇ ಸುತ್ತಿನಲ್ಲಿ ಅನಿರೀಕ್ಷಿತ ರೀತಿಯಲ್ಲಿ ಹೊರಬಿದ್ದ ಅವರು ಅಂಕಪಟ್ಟಿಯಲ್ಲಿ 8ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರು. ಇನ್ನು ತಮ್ಮ ಚೊಚ್ಚಲ ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಫೈನಲ್ ಪ್ರವೇಶಿಸಿ ಅಮೋಘ ಎಸೆತಗಾರಿಕೆ ತೋರಿದ ಭಾರತದ ಸಚಿನ್ ಯಾದವ್ ಅವರನ್ನು ನೀರಜ್ ಶ್ಲಾಘಿಸಿದ್ದಾರೆ. ಸಚಿನ್ ಯಾದವ್ ಫೈನಲ್‌ನ ಅಂತಿಮ ಸುತ್ತಿನಲ್ಲಿ 86.27 ಮೀಟರ್ ಎಸೆಯುವ ಮೂಲಕ ನೀರಜ್‌ಗಿಂತಲೂ ಉತ್ತಮ ಪ್ರದರ್ಶನ ತೋರಿ ದರು. ಮಾತ್ರವಲ್ಲ, ಅವರು ಅಂಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆದುಕೊಂಡರು.

ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ಪೋಸ್ಟ್ ಮಾಡಿರುವ ಅವರು, ಟೋಕಿಯೊದಲ್ಲಿ ನಡೆದ ವಿಶ್ವ ಚಾಂಪಿಯನ್‌ಶಿಪ್ ಅನ್ನು ಈ ರೀತಿಯಾಗಿ ಕೊನೆಗೊಳಿಸಲು ಬಯಸಿರಲಿಲ್ಲ. ಎಲ್ಲಾ ಸವಾಲುಗಳ ನಡುವೆಯೂ ನಾನು ಭಾರತಕ್ಕಾಗಿ ನನ್ನ ಅತ್ಯುತ್ತಮ ಪ್ರದರ್ಶನ ನೀಡಲು ಬಯಸಿದ್ದೆ, ಆದರೆ ಅದು ನನ್ನ ರಾತ್ರಿಯಾಗಿರಲಿಲ್ಲ ಎಂದು ಬರೆದುಕೊಂಡಿದ್ದಾರೆ.

ಇದೇ ಸಂದರ್ಭದಲ್ಲಿ ಸಚಿನ್ ಯಾದವ್ ಕುರಿತು ಪೋಸ್ಟ್ ಮಾಡಿರುವ ಅವರು, ವೈಯಕ್ತಿಕ ಶ್ರೇಷ್ಠ ಪ್ರದರ್ಶನ ನೀಡಿ ಪದಕ ಗೆಲ್ಲುವ ಹಂತಕ್ಕೆ ಸಚಿನ್ ಬಂದಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ.

## ಶಿಲುಬೆ ಬೆಟ್ಟದಲ್ಲಿ ಗಣಿಗಾರಿಕೆ ತಡೆಗೆ ಆಗ್ರಹ

• ಪ್ರಜೋದಯ ವರದಿ


**ಹಾಸನ:** ಆಲೂರು ತಾಲ್ಲೂಕಿನ ಹೊಸ ಮಠ ಗ್ರಾಮದ ಶಿಲುಬೆ ಬೆಟ್ಟದಲ್ಲಿ ಗಣಿಗಾರಿಕೆ ನಡೆಸುತ್ತಿರುವುದನ್ನು ವಿರೋಧಿಸಿ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಮಹಿಳಾ ಘಟಕದ ನೇತೃತ್ವದಲ್ಲಿ ಗ್ರಾಮಸ್ಥರು ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಹಿಳಾ ಅಧ್ಯಕ್ಷೆ ಸುಧಾ ಗಿರೀಶ್ ಅವರು ಮಾತನಾಡಿ, ಹೊಸ ಮಠ ಗ್ರಾಮದ ಸರ್ವೆ ನಂ.151 ರಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯಿಂದ ಗ್ರಾಮಸ್ಥರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಅಕ್ರಮ ಬ್ಲಾಸ್ಟಿಂಗ್‌ಗಳಿಂದ ಮನೆಗಳಿಗೆ ಬಿರುಕು ಬಿದ್ದಿದ್ದು, ಕೃಷಿ ಭೂಮಿಗಳಿಗೆ ಗಣಿಗಾರಿಕೆಯ ಕಲುಷಿತ ನೀರು ನುಗ್ಗುತ್ತಿರುವುದರಿಂದ ರೆತರ ಜೀವನ ಸಂಕಷ್ಟಕ್ಕೀಡಾಗಿದೆ ಎಂದು ಆರೋಪಿಸಿದರು.

ಶಿಲುಬೆ ಬೆಟ್ಟ ಕ್ರೈಸ್ತ ಸಮುದಾಯದ ಧಾರ್ಮಿಕ ಕೇಂದ್ರವಾಗಿರುವುದರಿಂದಲೂ ಗಣಿಗಾರಿಕೆ ಅಲ್ಲಿ ನಡೆಯುವುದು ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡುತ್ತಿದೆ. ಈ ಹಿಂದೆ ಗಣಿಗಾರಿಕೆ ಬಂದ್ ಆಗಿತ್ತು. ಆದರೆ, ಮರು ಪ್ರಾರಂಭಿಸಲು ಕೆಲವರು ಪಿತೂರಿ ನಡೆಸುತ್ತಿದ್ದಾರೆ. ಸರ್ಕಾರ ತಕ್ಷಣ ಕ್ರಮ ಕೈಗೊಂಡು ಗ್ರಾಮಸ್ಥರ ಮೇಲೆ ನಡೆಯುತ್ತಿರುವ ಕಿರುಕುಳವನ್ನು ತಡೆಗಟ್ಟಬೇಕೆಂದು ಆಗ್ರಹಿಸಿದರು.

ಗಣಿಗಾರಿಕೆ ತಡೆಯುವ ಹಿನ್ನಲೆ ಕೆಲ ದಿನಗಳ ಹಿಂದೆ ಅಕ್ರಮ ಗಣಿಗಾರಿಕೆ ವಿರೋಧಿಸಿ ಹೋರಾಟ ನಡೆಸಿದ್ದ ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ಸತೀಶ್ ಪಟೇಲ್ ಅವರ ಮೇಲೆ ಜಾತಿ ನಿಂದನೆ ಆರೋಪ ಮಾಡಿರುವುದು ಖಂಡನೀಯ. ಭೋವಿ ಸಮುದಾಯದ ಜಾತಿ ನಿಂದನೆ ಮಾಡಿದ್ದಾರೆಂಬ ಆರೋಪ ಸತ್ಯಕ್ಕೆ ದೂರವಾಗಿದ್ದು, ಇದು ಹೋರಾಟವನ್ನು ಹತ್ತಿಕ್ಕಲು ನಡೆದಿರುವ ಪಿತೂರಿಯಾಗಿದೆ. ಗಣಿಗಾರಿಕೆಯನ್ನು ಶಾಶ್ವತವಾಗಿ ನಿಲ್ಲಿಸಿ ಹೋರಾಟಗಾರರ ವಿರುದ್ಧದ ಸುಳ್ಳು ಆರೋಪಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ರಮೇಶ್ ಪೂಜಾರಿ, ರವಿ ಕುಮಾರ್, ಗ್ರಾಮಸ್ಥರಾದ ಲಿಖಿತ್, ಅರ್ಜುನ್, ಜಾನ್‌ಪಾಲ್, ಸಂತೋಷ್ ಕುಮಾರ್, ಗೋಪಾಲ್ ಚೇತನ್, ರವಿ ಇತರರು ಹಾಜರಿದ್ದರು.



## ಸಫಾಯಿ ಮಿತ್ರ ಸುರಕ್ಷಾ ಶಿಬಿರ



• ಪ್ರಜೋದಯ ವರದಿ

**ಹಾಸನ:** ಮೈಸೂರು ರೈಲ್ವೆ ವಿಭಾಗದಿಂದ ಸಕಲೇಶಪುರ ರೈಲ್ವೆ ಆರೋಗ್ಯ ಘಟಕದಲ್ಲಿ ಸಫಾಯಿ ಸಿಬ್ಬಂದಿಗಾಗಿ ಸಫಾಯಿ ಮಿತ್ರ ಸುರಕ್ಷಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಕೇಂದ್ರ ಕಚೇರಿಯಲ್ಲಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಮುದಿತ್ ಮಿತ್ತಲ್ ಶಿಬಿರಕ್ಕೆ ಚಾಲನೆ ನೀಡಿದರು. ಕೇಂದ್ರ ಹಾಗು ರಾಜ್ಯ ಸರ್ಕಾರದಿಂದ ಸಫಾಯಿ ಕಾರ್ಮಿಕರಿಗೆ ಲಭ್ಯವಿರುವ ವಿವಿಧ ಕಲ್ಯಾಣ ಯೋಜನೆ ಮತ್ತು ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಯಿತು.

ರಕ್ತದೊತ್ತಡ, ಮಧುಮೇಹ ಮತ್ತು ಅತಿಯಾದ ತೂಕದ ತಪಾಸಣೆ ನಡೆಸಲಾಯಿತು. ಆರೋಗ್ಯ ಸ್ಥಳದಲ್ಲಿ ಮುನ್ನೆಚ್ಚರಿಕೆ, ಪೌಷ್ಟಿಕಾಂಶ ಆಹಾರ ಸೇವನೆ ಕುರಿತು ಅರಿವು ಮೂಡಿಸಲಾಯಿತು. ಸಕಲೇಶಪುರದಲ್ಲಿ ಹಮ್ಮಿಕೊಂಡಿದ್ದ ಶಿಬಿರದ ನೇತೃತ್ವವನ್ನು ಹಿರಿಯ ಕಲ್ಯಾಣ ನಿರೀಕ್ಷಕ ಮೂರ್ತಿ ವಹಿಸಿದ್ದರು. ರೈಲ್ವೆ ಇಲಾಖೆಯ 7 ಸಿಬ್ಬಂದಿ ಕರ್ತವ್ಯ ನಿರ್ವಹಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019